
# ಕೊರವಂಜಿ



ಫೆಬ್ರವರಿ

೧೯೪೨


KURAVANJI

Kannada Monthly



ಸಂಪಾದಕರು :

ಶ್ರೀ॥ ರಾ. ಶಿ.


ಬರಹಗಾರರು :

ಶ್ರೀ॥ ಆ. ರಾ. ಸೆ.

ಶ್ರೀ॥ ಶ್ರೀರಂಗ

ಶ್ರೀ॥ ಎಂ. ಎಸ್. ಕೆ.

ಶ್ರೀ॥ ಬೆ. ನ. ಮೂರ್ತಿ

ಶ್ರೀ॥ ನಾ. ಕಸ್ತೂರಿ

ಶ್ರೀ॥ ಕೆ. ಎಚ್. ಕಿಟ್ಟನ್

ಶ್ರೀ॥ ರಾಮಿ

ಶ್ರೀ॥ ದಾಶರಥಿದೀಕ್ಷಿತ್

ಇತ್ಯಾದಿ

೨೫ ಪೈ

ತಿಳಿನಗೆಯ ಮಾಸಪತ್ರಿಕೆ

ತನ್ನ ಹೊಸ ಹೊದಿಕೆಯನ್ನು ಪಡೆದ

## ಮೈಸೂರು ಗಂಧದ ಸಾಬೂನನ್ನು

ಗಮನಿಸಿರಿ

★

ಇದನ್ನು ನವೀನ ರೀತಿಯ ಸ್ವಯಂಚಾಲಿತ ವ್ಯಾಕುಮ ಸೋಪ್‌ಪ್ಲಾಂಟಿನಿಂದ ತಯಾರಿಸಲಾಗುತ್ತದೆ

★

ಈ ಗಂಧದ ಸೋಪನ್ನು ಅದರ ವಿಶಿಷ್ಟ ಗುಣಗಳಲ್ಲಿ ಯಾವುದು ಸರಿಗಟ್ಟಲಾರದು

★

# ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆ

**ಬೆಂಗಳೂರು – ೧೨**

Koravanji, February 1967

# ಕೊರವಂಜಿ

ಸಂಪುಟ ೨೫]   ಫೆಬ್ರವರಿ ೧೯೬೭   [ಸಂಚಿಕೆ ೧೧

## ಕುಹಕಿಡಿಗಳು

ಬೊಂಬಾಯಿನಲ್ಲಿ ಶಿವ ಸೇನಾದವರು ಗೋವನ್ನರ ಹೋಟಲುಗಳಮೇಲೆ ಧಾಳಿ ಮಾಡುತ್ತಾರೆಂಬುದು ಖಚಿತವಲ್ಲವಂತೆ.

*   *   *   *

ಕೆಲವು ಪಕ್ಷಿಗಳು ಮರಗಳಲ್ಲಿ ಅವಳಿಜವಳಿ ಗೂಡುಗಳನ್ನು ಕಟ್ಟುತ್ತವಂತೆ

—ಅಂದರೆ ಹೆಣ್ಣು ಪಕ್ಷಿಗಳಲ್ಲೂ ಸವತಿ ಕಾಟ! ಅದನ್ನು ತಪ್ಪಿಸಲು ಎರಡು ಬೇರೆ ಮನೆ! ವಾರೇ ವ್ಹಾ!

*   *   *   *

ಮಹಾರಾಷ್ಟ್ರ ಗೋಮಂತಕ ಪಕ್ಷದ ನಾಯಕ ಬಾಂದೋಡ್ಕರ್ ಅವರಿಗೆ ಬೊಂಬಾಯಿನಲ್ಲಿ ದೊಡ್ಡ ಹುದ್ದೆಯನ್ನು ಕೊಡುತ್ತಾರಂತೆ.

—ಪಾಪ! ಅಷ್ಟೂ ಬೇಡವೇ?

*   *   *   *

ಗೋವಾ ಚುನಾವಣಾ ಫಲಿತಾಂಶಗಳನ್ನು ನೋಡಿದಮೇಲೆ ಶ್ರೀ ಮಾನ್ಯ ಶ್ರೀ ನಿಜಲಿಂಗಪ್ಪನವರು ತಮ್ಮ ಭವಿಷ್ಯದಲ್ಲಿ ಪೂರ್ಣ ಆಶಾದಾಯಕ ಭರವಸೆ ಹೊಂದಿದರಂತೆ.

*   *   *   *

ಆಸ್ಪತ್ರೆಗಳಲ್ಲಿ ಸಿನಿಮಾಗಳನ್ನು ತೋರಿಸುಕ್ಕೆ ಶುರುಮಾಡಿದಾಗಿನಿಂದ ಎಷ್ಟೋಜನ ರೋಗಿಗಳಿಗೆ ಕಣ್ಣುತುಂಬಾ ನಿದ್ರೆ ಬರುತ್ತಿದೆಯಂತೆ.

ಮಾರ್ಮಗೋವಾವನ್ನು "ಫ್ರೀ ಪೋರ್ಟ್" ಮಾಡಿದರೆ ಕೇಂದ್ರಾಡಳಿತದ ಸಡಿಲತೆಯನ್ನು ನೋಡಿದರೆ, ಜಾಣ ಗೋವನ್ನರು ಇಡೀ ಭಾರತದ ದಾಹವನ್ನು ಕತ್ತಲೆಯಲ್ಲಿ ತಣಿಸಿ, ಲಕ್ಷಾಧೀಶ್ವರಲ್ಲ! ಕೋಟ್ಯಾಧೀಶ್ವರರಾಗಬಹುದು !!

*　　*　　*　　*

ಅಧ್ಯಕ್ಷ ಸುಕಾರ್ನೋ ಅವರೊಡನೆ ಮಾನ್ಯ ಭಾಗ್ಲಾ ಅವರು ಕ್ಯಾಕರಿಸಿ ಮಾತನಾಡಿದರಂತೆ.

*　　*　　*　　*

ಗೋವನ್ನರು ಈ ರೀತಿ ಅಭಿಪ್ರಾಯ ಸೂಚಿಸಬಾರದಾಗಿತ್ತು. ಅವರು ಅಭಿಪ್ರಾಯ ಬದಲಿಸುವತನಕ ಆಮರಣಾಂತ ಉಪವಾಸ ಮಾಡುತ್ತೇನೆ ಎಂದು ಮಹಾರಾಷ್ಟ್ರದ ನಾಯಕಮಣಿಗಳು ಇನ್ನೂ ಹೇಳಿಲ್ಲವಂತೆ.

*　　*　　*　　*

ಚೀಣಾದ ಅಧ್ಯಕ್ಷರು ತಪ್ಪೊಪ್ಪಿಗೆಯನ್ನು ಹಿಂತೆಗೆದುಕೊಂಡಿದ್ದಾರಂತೆ
—ಅತ್ತೆಗೊಂದು ಕಾಲ, ಸೊಸೆಗೆರಡು ಕಾಲು.

*　　*　　*

ಕೆಂಪಾಬುಧಿ ಕೆರೆಯ ಹತ್ತಿರ ಸ್ಮಶಾನದ ಅಂಚಿನಲ್ಲಿ ರಾತ್ರಿ ಯಾವುದೋ ದೆವ್ವ ಮಾತನಾಡುತ್ತಿತ್ತು ಎಂದೊಬ್ಬರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

—ದೆವ್ವ ಅಲ್ಲರೀ! ಯಾರೋ ಚುನಾವಣಾ ಭಾಷಣ ಬಿಗಿಯುತ್ತಿದ್ದಿರಬೇಕು.

*　　*　　*　　*

ಬಸ್ತಾರ್ ಮಹಾರಾಜರ ನೆನಪಿಗಾಗಿ ರಾಯಪುರದಿಂದ ಸ್ಪರ್ಧಿಸುತ್ತೇನೆ ಎಂದು ಆಚಾರ್ಯ ಕೃಪಲಾನಿ ಹೇಳಿಕೆ ಇತ್ತರು.

—ಬಸ್ತಾರ್ ರಾಜ ಈ ರೀತಿ ಸತ್ತು ಬದುಕಿದ.

ಆಚಾರ್ಯರು ಇದೇ ರೀತಿ ಇದ್ದು ಗದ್ದಲ ಮಾಡುತ್ತ ಸತ್ತಿದ್ದಾರೆ.

*　　*　　*　　*

ಫೆಡರಲ್ ಆಸ್ಸಾಂ ಇನ ತರಹ ದಕ್ಷಿಣಭಾರತದ ಫೆಡರಲ್ ಸಂಸ್ಥೆಯನ್ನು ನಿರ್ಮಿಸಬೇಕು ಎಂದು ಡಿ. ಎಂ. ಕೆ. ಇನ್ನು ಮುಂದೆ ಚಳುವಳಿ ನಡೆಸುತ್ತಾರೆಂಬುದು ಖಂಡಿತವಲ್ಲವಂತೆ.

*　　*　　*　　*

ಮಾಜಿ ಜನರಲ್ ಕೌಲ್ ಅವರು ಬಿಸಿ-ಹಸಿ ಪುಸ್ತಕ ಬರೆದಿದ್ದಾರಂತೆ.
—ಅಂಜಿ ಓಡಿಹೋದವರು ನಂತರ ನಂಜು ಉಗುಳಲೇಬೇಕು. !!

# ರೂಪಕುಮಾರ ಎತ್ತ ಸಾಗಿದ್ದಾನೆ ?

ಮುರಿಗೇಶಿ ಭಾವಿಸಿದಂತೆ ದೆವ್ವನ ಕಾಟವನ್ನು ನಿವಾರಿಸಿಕೊಳ್ಳುವುದು ಸುಲಭವಾಗಿರಲಿಲ್ಲ. ಹುಣ್ಣಿಮೆ ಅಮಾವಾಸ್ಯೆಗಳಿಗೊಮ್ಮೆ ಕಾಡುತ್ತಲೇ ಇತ್ತು. ಅದು.

ರೂಪ ಕುಮಾರ ಬರಬರುತ್ತಾ ಹೆಚ್ಚು ಹೆಚ್ಚು ಅಂದವಾಗತೊಡಗಿದ. ಅವನ ಮಿತ್ರನೊಬ್ಬನ ಬಿಟ್ಟ ಸ್ಕೂಟರಿನಮೇಲೆ ಮುಗಿಲು ಹಳ್ಳಿಯ ಒಂದಾನೊಂದು ರಸ್ತೆಯಮೇಲೆ ಮತ್ತೆ ಮತ್ತೆ ಸಂಚರಿಸತೊಡಗಿದ. ಅವನ, ಸ್ಕೂಟರಿನ ಭರಾಟೆಯನ್ನು ಗಮನಿಸಿದ ಯಾರಿಗಾದರೂ ಹೊಟ್ಟೆಯಲ್ಲಿ ಉರಿ ಬೀಳುತ್ತಿತ್ತು. ರೂಪಕುಮಾರ, ಸಹಜವಾಗಿಯೇ ಸುಂದರನಾದ ವ್ಯಕ್ತಿ. (ಅವನ ಮುಖ ತನ್ನ ಕತ್ತಿನಮೇಲೆ ಇದ್ದ ಪಕ್ಷದಲ್ಲಿ ತಾನು ಸಿನಿಮಾ ಹೀರೋ ಆಗುತ್ತಿದ್ದೆನೆಂದು ಮುರಿಗೆಜ್ಜ ಹೇಳುತ್ತಿದ್ದ) ಅವನು ಸವಾರಿ ಮಾಡುತ್ತಿದ್ದ ಸ್ಕೂಟರು ಬಿಟ್ಟಿಯದೆಂದು ಯಾರಿಗೂ ತಿಳಿಯದು. ಅವನ ಸರ್ವಾಸಹ್ಯ ಸುರಿಯುತ್ತಿದ್ದ ತಲವಾರ್ ಕಟ್ ಮೀಸೆಯೊಂದು ಇಲ್ಲದಿದ್ದ ಪಕ್ಷದಲ್ಲಿ ಅವನು ಸಿನಿಮಾ ನಟನೆಂದರೆ ಅಲ್ಲವೆನ್ನಲು ಯಾರಿಗೂ ಧೈರ್ಯ ಬರುತ್ತಿರಲಿಲ್ಲ.

ವಿಧಿವಶದಿಂದ ಯಾವ ಬೀದಿಯಲ್ಲಿ ರೂಪಕುಮಾರ ಅಲೆಯುತ್ತಿದ್ದನೋ ಅದೇ ಬೀದಿಯಲ್ಲಿ ಮುರಿಗೆಜ್ಜನೂ ಅಲೆಯುತ್ತಿದ್ದ. ಅವರಿಬ್ಬರೂ ಮುಖ ಮುಖ ನೋಡಿ ಮುಂದಕ್ಕೆ ಸಾಗುತ್ತಿದ್ದರು.

ಒಂದಾನೊಂದು ತರಗತಿಯಲ್ಲಿ

" what is the value of mew " ಎಂದು ರೂಪಕುಮಾರ ಕೇಳಿದ.

ಮುರಿಗೆಜ್ಜ " ಮಿಯಾವ್ " ಎಂದ. ತರಗತಿಯ ಎಲ್ಲರೂ ಗೊಳ್ಳನೆ ನಕ್ಕರು.

" why do you laugh ! ಎಂದು ರೂಪ್ ಕಿರುಚಿದ.

" ನಗು ಬರ್ತ್ತಲೇ " ಎಂದು ಮುರಿಗೇಶಿ ಕೂಗಿದ.

" ಬೀದಿ ಬೀದಿ ಹುಚ್ಚ ನಾಯಿ ಹಂಗೆ ಅಲೀತಿರ್ರೀ. ಇಲ್ಲಿ ಪ್ರಶ್ನೆ ಕೇಳಿದರೆ ತಲೆಹರ್ಕೆ ಮಾಡ್ತೀ.''

" ನಿಮ್ಮವೇನ್ಲೇ ಬೀದಿ ? ನಮ್ಮೂರಿನ್ಬೀದಿ. ನಾವಲೀತಿವಿ. ನೀನ್ಯಾವನು ಕೇಳಕ್ಕೆ ?" ಎಂದು ಹಿಂದಿನ ಬೆಂಚು ಒದರಿತು.

" What is that? Stand up Murgesh, ಇವತ್ತೆಳಿಗ್ಯೆ ನೀನು ಅಲೀತಾ ಇರ್ಲಿಲ್ಲೇ?"

" ಹೌದು-ಸಾರ್ "

" ನಿನ್ನೆ ಸಂಜೆ ಅಲೀತಿರ್ಲಿಲ್ಲೇ ಅದೇ ಬೀದಿ ಒಳಗೆ "

" Yes Sir "

" ನಿನ್ನೆ ಮಧ್ಯಾಹ್ನ ? "

" ಅಲ್ಲೇ ಅಲೀತಿದ್ದೆ "

" ನಿನ್ನೆ ಬೆಳಿಗ್ಯೆ "

" ಆಗಲೂ "

" ನಿನಗೆ ಫಿಸಿಕ್ಸ್ ಹೇಗೆ ಬರುತ್ತದೆ ? Do you know the importance of mew ? "

ನಾನೇನೋ ಅಲೀತಿದ್ದ ಸೈ. ನೀವ್ಯಾಕೆ ನಿನ್ನೆ ಬೆಳಿಗ್ನಿಂದ ನನ್ನೋಡ್ಕೆಂತ ಅಲೀತಿದ್ರಿ. ನೀವು ಮಾಡಿದ್ಹಂಗೇ ನಾನು."

" You should not question me "

" ನನ್ನೂ ಅಷ್ಟೇ. "

" I do not want you in the class clear out. "

ಪುಗ್ಸಟೆದಲ್ಲ ಸರ್. ಡೊನೇಷನ್ ಫೀಸು, ಟ್ಯೂಷನ್ ಫೀಸು ಕೊಟ್ಟು ಕಾಲೇಜಿಗ್ಬರ್ತಿವಿ. ಹೊರಗ್ಯಾಕೆ ಹೋದೇವು. "

" You are a rowdy "

" ನೀನೂ ಅಷ್ಟೆ."

" ಈ ಕಾಲೇಜಿಗ್ಸೇರಿದ್ವರ್ಷ ನೀನು...."

" ಅದನ್ನೇ ಮತ್ತೆ ಮತ್ತೆ ಹೇಳಬ್ಯಾಡೋ. ಅದೇನ್ಮಾಡಿದ್ದೆ ಹೇಳು."

ರೂಪಕುಮಾರ್ ಮುಖ ಕೆಂಪಾಯಿತು. ಬಾಯಿ ಬಿಟ್ಟಾಗ ಬೆ ಬೆ ಬೆ ಎನ್ನುವ ಸದ್ದು ಬಂದಿತೇ ಹೊರತು ಇನ್ನೇನೂ ಬರಲಿಲ್ಲ. 'ರೂಪಾಲ್ಯ' ತೆಪ್ಪಗಾದ. ಪ್ರತಿ ಕ್ಲಾಸಿನಲ್ಲೂ ಇದೇ ತರಹ ಗಲಭೆಯಾಗುತ್ತಿತ್ತು.

ಘಟನಾವಳಿಗೆ ಒಂದು ದುರ್ಲಕ್ಷಣವಿದೆ. ಈ ಲೋಕದಲ್ಲಿ ಇನ್ನೇನೂ ಆಗುವುದಿಲ್ಲ, ಅದೇ ಹಳೆಯ ಬೋರ್ ಎಂದು ಜನರೆಲ್ಲರೂ ಹತಾಶರಾಗುವ ಹೊತ್ತಿಗೆ ಕೆಲವೇ ಸೆಕೆಂಡ್, ನಿಮಿಷ ಅಥವಾ ದಿನಗಳಲ್ಲಿ 'ಕ್ಲೈಮ್ಯಾಕ್ಸ್' ಸೀನುಗಳು ಒಂದರ ನಂತರ ಒಂದು ಘಟಿಸಿ ಬಿಡುತ್ತವೆ. ಇದೇನು ಎಂದು ಕಣ್ಣು ತೆರೆಯುವಷ್ಟರಲ್ಲಿ ಮತ್ತೆ ಎಲ್ಲಾ ಮಾಮೂಲಿಗೆ ಬಂದಿರುತ್ತದೆ.

ಹೀಗೆ ಘಟನಾವಳಿಗಳ ಮಾಲೆ ಒಂದರ ಹಿಂದೆ ಒಂದರಂತೆ ನಡೆಯಿತು.

೧) ಮುರಿಗೇಶಿಯ ಮದುವೆ ಇನ್ನೇನು ಸೆಟ್ಲ್ ಆಯಿತು. ಕಾರಣ ಸ್ಪಷ್ಟವಾಗಲಿಲ್ಲ.

೨) ಕೆ. ಕೆ. ಡಿ. ಎಂ. ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರ ನಡೆಯಿತು. ಎಲ್ಲಿಂದೆಲ್ಲಿಗೆ ಒಂದು ಕೇಳಬೇಡಿ.

ಕೆ. ಕೆ. ಡಿ. ಎಂ. ಕಾಲೇಜಿನ ಒಬ್ಬ ವಿದ್ಯಾರ್ಥಿನಿ ರೂಪಕುಮಾರನಿಗೆ ಪೆಟ್ ಆಗಿದ್ದಳು. ಅದಕ್ಕೆ ಕಾರಣವೆಂದರೆ ಅವಳೊಬ್ಬಳೇ ಅವನ ಪಾಠವನ್ನು ಕೇಳುತ್ತಿದ್ದವಳು. ಅವಳ ಬಗೆಗೆ ರೂಪಕುಮಾರ್ ಅಪಾರ ಆದರ ಗೌರವಗಳನ್ನಿಟ್ಟುಕೊಂಡಿದ್ದ. (ಅವನಿಗೆ ಇದ್ದ ಮಾರ್ಗ ವಿನ್ನಾವುದು) ಅವಳು ರೂಪಸಿ ಬುದ್ಧಿವಂತೆ ಆದರೆ ಮುಗ್ಧ.

ಆದುದರಿಂದಲೇ ರೂಪಕುಮಾರನಿಗೆ ಸಬ್ಜೆಕ್ಟ್ ಏನೇನೂ ತಿಳಿದಿಲ್ಲವೆಂದು ಅವಳಿಗೆ ಗೊತ್ತಾಗಿರಲಿಲ್ಲ. " ಒಂದು ವರ್ಣವನರುಹಿದ ಗುರು " ಎಂಬ ಪದ್ಯವನ್ನು ಅವಳು ಬಾಲ್ಯದಲ್ಲಿಯೇ ಕಲಿತಿದ್ದಳು. ' ಉಷಾ ಕುಂಟಲಿಪಿ ಆಡಿದಳು ' " ಕೆಂಪನು ಮಳೆಯಲ್ಲಿ ನೆನೆದನು " ಎಂಬ ಆಧುನಿಕ ವಿದ್ಯಾ ತಜ್ಞರ ಪಾಠಗಳಲ್ಲಿ ಅವಳ ತಂದೆಗೆ ನಂಬುಗೆ ಸಾಲದು. ನಿರಂತರ ಬದಲಾವಣೆಯೇ ಪ್ರಗತಿಯೆಂದು ಆತ ನಂಬಿರಲಿಲ್ಲ. ಆದುದರಿಂದ ರೂಪಕುಮಾರ ತನ್ನ ತರಗತಿಯಲ್ಲಿ ಅವಳನ್ನು ಆದರ್ಶ ವಿದ್ಯಾರ್ಥಿನಿಯೆಂದು ಹೇಳುತ್ತಿದ್ದ.

ಮುರಿಗೆಜ್ಜ ಕಾಲೇಜಿಗೆ ಸೇರಿದ ವರ್ಷ ಒಂದು ದಿನ ರೂಪಕುಮಾರ ಕಾಲೇಜಿಗೆ ಹೊರಟಿದ್ದ. ಅವನ ಮುಂದೆ ಅನತಿ ದೂರದಲ್ಲಿ ಒಬ್ಬ ಹುಡುಗಿ ಹೋಗುತ್ತಿದ್ದಳು. ಅವಳ ಹಿಂದೆ ಮುರುಗೇಶಿ ಉಚ್ಚ ಸ್ವರದಲ್ಲಿ ಹಾಡು ಹೇಳುತ್ತಾ ಹೊರಟಿದ್ದ. ಸ್ವಲ್ಪ ಹೊತ್ತಿನ ನಂತರ ಹತ್ತಿರಕ್ಕೇ ಹೋಗಿ ಏನನ್ನೋ ಹೇಳಿರಬೇಕು ; ಅವಳು ಭಯದಿಂದ ಕೂಗಿದಳು. ಎಲ್ಲಿಯೂ ಪೋಲೀಸರು ಕಾಣಲಿಲ್ಲ. Damsel in distress ನ ಉದ್ಧಾರಕೆಂದು ರೂಪಕುಮಾರ ಓಡಿಹೋದ. ಮುರಿಗೇಶಿಯನ್ನು ಹಿಂದಕ್ಕೆಳೆದು ತಪರಾಕಿ ಬಿಗಿದ. ನಿನ್ನನ್ನು ಪೋಲೀಸಿಗೆ

ಹಿಡಿದುಕೊಡುತ್ತೇನೆ ಎಂದು ಹೆದರಿಸಿದ. ಕಾಲೇಜಿಗೆ ಆಗತಾನೇ ಸೇರಿದ್ದ ಮುರಿಗೇಶಿ ಆ ಕ್ಷಣದಲ್ಲಿ ಹೆದರಿದ. ಲಜ್ಜಾವನತೆಯಾದ ಆ ಹುಡುಗಿ ಸ....ಸ.... ಸಾರ್ ಯಾರಿಗೂ ಹೇಳಬೇಡಿರಿ " ಎಂದಳು.

" ಇಂತಹ ಪುಂಡರಿಗೆ ಸರಿಯಾದ ಬುದ್ಧಿ ಕಲಿಸದಿದ್ದರೆ ದೇಶದ ನೈತಿಕ ಅಧಃಪತನ ಶತಃಸಿದ್ಧ ಎಂದ ರೂಪಕುಮಾರ್

ಮುರಿಗೆಜ್ಜ ಧೈರ್ಯ ತೆಗೆದುಕೊಂಡು

" ಯಾರು ಬೇಡ ಅಂದರು ಸರ್. ಊರಿಗೆಲ್ಲಾ ಹೇಳಿ. ನನಗೆ ಶಿಕ್ಷೆ ಮಾಡಲಿ " ಎಂದ.

ಆ ಹುಡುಗಿ ಯೋಚನೆ ಮಾಡಿ " ಬೇಡ ಸರ್ " ಎಂದಳು. ಅಲ್ಲಿಗೆ ಆ ಘಟನೆ ಮುಕ್ತಾಯವಾಯಿತು.

ಆ ಹುಡುಗಿಯು ಮನೆಯಿದ್ದ ಬೀದಿಯಲ್ಲೇ ಮುರಿಗೆಜ್ಜ ಓಡಾಡುತ್ತಿದ್ದದ್ದು. ಅಲ್ಲಿಯೇ ರೂಪಕುಮಾರನ ಸ್ಕೂಟರ್ ಭರಾಟೆಯಿಂದ ನುಗ್ಗುತ್ತಿದ್ದದ್ದು.

ಆ ಹುಡುಗಿ ಮುರಿಗೆಜ್ಜನ ಸೋದರತ್ತೆಯ ಮಗಳು. ಅವಳು ಮುರಿಗೆಜ್ಜ ಕಪ್ಪಾಗಿದ್ದನೆಂಬ ಕಾರಣದಿಂದ ಅವನನ್ನು ಮದುವೆಯಾಗಲು ತಿರಸ್ಕರಿಸಿದಳೆಂದು ಮುರಿಗೆಜ್ಜನಿಗೆ ಅವಳಮೇಲೆ ಕೋಪ. ಎಂದರೆ ಅವಳನ್ನು ಮದುವೆಯಾಗಲು ಅವನಿಗೆ ಇಷ್ಟವಿತ್ತೆಂದಲ್ಲ. ಅವನು ಇನ್ನೂ ಹಳೆಂಟು ವರ್ಷ ಮದುವೆಯಾಗಲು ಉದ್ದೇಶಿಸಿರಲಿಲ್ಲ.

ಆ ಹುಡುಗಿ ಮದುವೆಯನ್ನು ಕುರಿತು ಯೋಚನೆಯನ್ನೇ ಮಾಡಿರಲಿಲ್ಲ. ದೇಶಸೇವೆಯಲ್ಲಿ ತನ್ನ ಜೀವನವನ್ನು ಸವೆಸಿ ರಜಿಯಾ ಸುಲ್ತಾನಾ, ಚಾಂದ್ ಬೀಬಿ, ಲಕ್ಷ್ಮೀಬಾಯಿ ಮತ್ತು ಕಿತ್ತೂರು ಚನ್ನಮ್ಮ ಮೊದಲಾದವರಂತೆ ಕೀರ್ತಿಗಳಿಸ ಬೇಕೆಂದೇ ಅವಳ ಇಚ್ಛೆ. ಅಲ್ಲದೆ ಮುರಿಗೆಜ್ಜನ ವರ್ತನೆ ಅವಳಿಗೆ ಎಂದೂ ಹಿಡಿಸಿರಲಿಲ್ಲ. ಅವನು 'ಅವಿವೇಕ, ಉಡಾಳ, ಘಟಿಂಗ, ಪೋಕರಿ ಕುರಿ ಮತ್ತು ಕಕವ' ಎಂಬ ಪ್ರಶಸ್ತಿಗಳಿಗೆ ಎಲ್ಲ ವಲಯದಲ್ಲೂ ಪಾತ್ರನಾಗಿದ್ದ. ಉದಾ : ಅವಳ ಅಮ್ಮ, ಮಾವ, ಅಪ್ಪ ಅತ್ತೆ, ಅಣ್ಣ ಇತ್ಯಾದಿಗಳೆಲ್ಲರೂ ಆ ಮಾತುಗಳಿಂದ ಅವನನ್ನು ನಿಂದಿಸುತ್ತಿದ್ದುದನ್ನು ಅವಳು ಕೇಳಿದ್ದಳು. ಅವಳ ತಂದೆಗೂ ಮಾವನಿಗೂ ಅಷ್ಟಕ್ಕಷ್ಟೇ ಎಂದು ಅವಳಿಗೆ ಗೊತ್ತಿತ್ತು. ಹಾಗಾಗಲು ತಾನೇ ಕಾರಣ ಎಂಬುದನ್ನು ಅವಳು ಅರಿಯಳು. ಅವಳನ್ನೇ ತನ್ನ ಮಗನಿಗೆ ತಂದು ಕೊಳ್ಳಲು ಮಾವ ಹಟ ಹಿಡಿದದ್ದ. ಮುರಿಗೆಜ್ಜನಿಗೆ ಮಗಳನ್ನು ಕೊಡಲು ಅವಳ ತಂದೆಯು ಆಕ್ಷೇಪಣೆಯೇನೂ ಇಲ್ಲದಿದ್ದರೂ ಅವನು ಮುರಿಗೆಜ್ಜನ ಬಗೆಗೆ ತಟಸ್ಥನಾಗಿದ್ದ. ತನ್ನ ಮಗಳನ್ನು ವಿದ್ಯಾವಂತೆಯನ್ನಾಗಿ ಮಾಡಿ, ವಿದ್ಯಾವಂತನಿಗೇ ಅವಳನ್ನು ಕೊಡಲು ಉದ್ದೇಶಿಸಿದ್ದ ತನ್ನ ಮತ್ತು ತನ್ನ ಭಾವನ (ಮುರಿಗೆಜ್ಜನ ತಂದೆ) ಹಾಗೆ ತನ್ನ ಅಳಿಯನೂ, ಬೊಂಬೈ ರೇಟು, ಟಕ್ಕಾ, ಲೋಕಲ್ ರೇಟು,

ತೇಜಿ ಮಂದಿ ಇತ್ಯಾದಿಗಳ ಬಗೆಗೆ ತಲೆ ಕೆಡುವ ಮಾತನ್ನು ಆಡುವುದು ಅವನಿಗೆ ಅಷ್ಟಾಗಿ ಇಷ್ಟವಿರಲಿಲ್ಲ.

ರೂಪಕುಮಾರನಿಗೆ ಈ ನಡುವೆ ಒಂದು ಬ್ರೈಟ್ ಐಡಿಯಾ ಹೊಳೆಯಿತು. ತನ್ನ ಕಾಲಿಗೆ ಒತ್ತುವ ನೆಗ್ಗಲೀ ಮುಳ್ಳನ್ನು ಬರೀ ಕಿತ್ತು ಹಾಕಿದರೆ ಸಾಲದು. ಮುಳ್ಳಿನ ಗಿಡವನ್ನು ಸಮೂಲವಾಗಿ ಕೀಳಬೇಕು ಎಂದು ಅವನು ನಿರ್ಧರಿಸಿ ಮುರಿಗೆಜ್ಜನ ತಂದೆಯ ಅಂಗಡಿಗೆ ಹೋದ.

ಸಾಹುಕಾರರು ಕುರ್ಚಿಗೊರಗಿ ಕುಳಿತಿದ್ದರು. ಅವರ ಸ್ಥೂಲ ದೇಹದ ಹೊರೆಗೆ ಕುರ್ಚಿ ಕಿರುಗುಡುತ್ತಿತ್ತು. ರೇಟುಗಳು ಗಗನಕ್ಕೇರಿದ್ದವು. ಲಾಭ ತೇಜಿಯಲ್ಲೇ ಬಂದೀತೇ ಹೊರತು ಮಂದಿಯಲ್ಲಲ್ಲ. ಆದುದರಿಂದ ಮಾಲು ತೇಜಿಯಾದಾಗಲೇ ಅದನ್ನು ಕೊಳ್ಳಬೇಕು. ಇನ್ನು ಅಕ್ಕಿಯ ರೇಟು ಐವತ್ತು ಏರಿದರೆ ಸಾಕು ತಮಗೆ ಎಂಬತ್ತುಸಾವಿರ ಲಾಭ. ಹಾಳಾದ ಫುಡ್ ಡಿಪಾರ್ಟ್‌ಮೆಂಟಿನವರು ಇಲ್ಲದಿದ್ದರೆ ಎಷ್ಟು ಬೇಕಿದ್ದರೂ ಸ್ಟಾಕ್ ಮಾಡಬಹುದಾಗಿತ್ತು. ಈಗ ಚೆಕ್ಕಿಂಗ್ ಪಿಕ್ಕಿಂಗ್ ಶುರುವಾಗಿದೆ. ಡಿಕ್ಲೇರ್ ಮಾಡಿಕೊಂಡದ್ದಕ್ಕಿಂತಲೂ ಇನ್ನೂರು ಚೀಲ ಹೆಚ್ಚಿಗೆ ಇದೆ. ಏನು ಮಾಡುವುದು ?

ಹೊರಗೆ ಸ್ಕೂಟರಿನ ಚೀತ್ಕಾರ ಕೇಳಿತು. ಇನ್ವಿಜಿಲೆನ್ಸ್ ಫುಡ್ ಸ್ಕ್ವ್ಯಾಡಿನವರೇ. ಇರಬೇಕು ! ಸಾಹುಕಾರರು ಗಡಗಡ ನಡುಗಿದರು.

"ಹಾಕಲೇ ರಸೂಲಾ ಗೋಡೌನ್ ಬಾಗ್ಲು" ಎಂದು ಕೂಗಿದರು. ರೂಪಕುಮಾರ ಮೀಸೆ ನೇವರಿಸುತ್ತಾ ಅಂಗಡಿಯೊಳಕ್ಕೆ ಕಾಲಿಟ್ಟ.

"ರೇ ಹುಸೇನೀ ಸಾಹೇಬರಿಗೆ ಒಂದು ಮೈಸೂರು ಪಾಕು, ಖಾರ, ಸೋಡಾ ಲೆಮನ್ ಆರೆಂಜ್ ಎಲ್ಲಾ ತತ್ತಾರ್‍ಹೋಗಲೇ. ಹೋಗಲೆ ಕುರಿನ....ಗನೇ. ಯಾಕೆ ಪಿಕಿ ಮಿಕಿ ನೋಡ್ಕೆಂತ ನಿಂತದಿ, ಬೆದರ್‍ಹೊಂಬೆ ಹಂಗೇ ಏನ್ಸಾರ್ ಪಾಡಾಗದಿರಾ ಯಾವಾಗ ಬಂದ್ರಿ."

"ಸರ್ !" ಎಂದ ರೂಪಕುಮಾರ.

ಸಾಹುಕಾರರಿಗೆ ಧೈರ್ಯ ಬಂತು. ಈ ಕಂತ್ರಿ ಫುಡ್ ಸ್ಕ್ವ್ಯಾಡಿನವನಲ್ಲ ಎಂದು.

"ಏನು ಬೇಕಾಗಿತ್ತು ?"

"ನಾನು ರೂಪ್ ಕುಮಾರ್ ಅಂತ ಕಾಲೇಜ್ ಲೆಕ್ಚರರ್"

"ಏನು ಸುದ್ದಿ ಮೇಷ್ಟ್ರೇ ದೂರ ಬಂದ್ರಿ" ಎಂದು ಸಾಹುಕಾರರು ತಮ್ಮೆದುರಿಗಿದ್ದ ಸಾಸರ್ ಬೋರಲು ಹಾಕಿದರು. ಅದರರ್ಥ ಹುಸೇನಿಗೆ ಗೊತ್ತು. ತಿಂಡಿ ಕಾಫಿ ಆರ್ಡರ್ ಕ್ಯಾನ್ಸಲ್ ಅಂತ. ಕಾಲೇಜು ಮೇಷ್ಟರುಗಳಿಗೆ ಬೆಲ್ಲದ ತುಂಡೂ ಸಿಕ್ಕದು. ಫುಡ್ ಸೆಕ್ಷನ್ ಕ್ಲಾರ್ಕ್ ಒಬ್ಬನು ಇಪ್ಪತ್ತು ಕಾಲೇಜಿನ ಪ್ರೊಫೆಸರುಗಳಿಗೆ ಸಮ ಎಂಬುದು ಅವರ ಸಮೀಕರಣ. (ಸಶೇಷ)

—ಅ. ರಾ. ಸೇ.

# ಕನಕಾಚಾರ್ಯರಿಗೆ ಕಾರ್ಸ್ಟಿಟ್ಯೂಷರ್ ಬೇಕಂತೆ

ಇದೇನು ಆಚಾರ್ಯರೊ? ಆಚಾರ್ಯರ ಭೂತವೊ! ಎಂದುಕೊಂಡು ನಾವು ನಾಲ್ಕೂ ಜನ ಒಮ್ಮೆಲೆ ಹಾಕಿದ ಬ್ರೇಕ್ ಇಗಾಗಿ ಕಿರುಚುವ ಸರ್ವೀಸ್ ಲಾರಿಯಂತೆ ಅಸ್ಪಷ್ಟವಾಗಿ ಕುಂಯ್ಗುಡುತ್ತ ಜಾರುವ ಹೆಜ್ಜೆಗಳನ್ನು ತಡೆದು ನಿಂತೆವು. ಎದುರಿಗೇ ಕನಕಾಚಾರ್ಯರ ಕಾಷ್ಠದೇಹ ಸಾಕಾರವಾಗಿ ನಿಂತಿದೆ! ಆಚಾರ್ಯರಿಗೆ ಟೈಫಾಯ್ಡ್ ಆಗಿತ್ತೆಂದೂ ಇದೀಗ ವಾಸಿಯಾಗಿ ಸದ್ಯಕ್ಕೆ ದಿನಾಲು ಮೂರು ಊಟಗಳನ್ನು ಮಾಡುವ ಮಟ್ಟಿಗೆ ಚಟುವಟಿಕೆಯ ಸಾಮರ್ಥ್ಯ ಇದೆ ಎಂದೂ ಸುದ್ದಿಯನ್ನು ಕೇಳಿದ್ದಕ್ಕೆ ಅವರನ್ನು ಕಾಣಲು ಹೊರಟ ನಮಗೆ ಆಚಾರ್ಯರ ಇದಿರಾಗಿ ನಿಂತದ್ದು ಬೆರಗುಗೊಳಿಸಿತ್ತು. ಅವರು ಅಸ್ವಸ್ಥರಾದಾಗ ಅವರನ್ನು ಕಾಣಲು ಹೋಗುವ ಉಪಚಾರ ಬುದ್ಧಿ ಕೂಡ ನಮ್ಮಲ್ಲಿರಲಿಲ್ಲವಲ್ಲ ಎಂದು ಪಶ್ಚಾತ್ತಾಪದಿಂದ ಅವಸರದಿಂದ ಹೊರಟಿದ್ದೆವು ಅದಕ್ಕಾಗಿ ಒಮ್ಮೆಲೆ ಬ್ರೇಕ್ ಹಾಕಿದ್ದು!

"ಇದೇನು, ಆಚಾರ್ಯರೆ—"

"ಇದು ನಾನು! ನಿಮಗೇನಾಗಿದೆ ಈ ಪರಿ ಭೂತ ಕಂಡವರ ಹಾಗೆ ನಿಂತು ಕೊಳ್ಳಿಕ್ಕೆ?" ಎಂದರು ಆಚಾರ್ಯರು. ಆಗ ನಾವು ಅವರನ್ನು ಕಾಣಲು ಹೊರಟದ್ದು ಅವಸರದಿಂದ ಯಾಕೆ ಹೊರಟದ್ದು—ಎಲ್ಲವನ್ನೂ ಹೇಳಿದೆವು

ಒಂದು ನಿಮಿಷ ನಮ್ಮನ್ನು ದಿಟ್ಟಿಸಿ ನೋಡಿ ಆಚಾರ್ಯರು. ಒಮ್ಮೆಲೆ ಗಟ್ಟಿಯಾಗಿ ನಕ್ಕರು ಸಂಚಾರಕ ಪೋಲೀಸ ಪಥಕವು ಧ್ವನಿವರ್ಧಕದಲ್ಲಿ ಕೊಡುವ ಆದೇಶ ದಂತೆ ಕೇಳಿಸಿತೇನೋ ಆ ನಗೆ! ಯಾಕೆಂದರೆ, ಅವರು ನಕ್ಕಾಕ್ಷಣ ಪಾದಚಾರಿಗಳ ನ್ನೊಳಗೊಂಡು ಎಲ್ಲ ಸಂಚಾರವಾಹನವು ಒಮ್ಮೆಲೆ ತಡೆದು ನಮ್ಮನ್ನೇ ನೋಡ ತೊಡಗಿತು ನಮಗೂ ಎಚ್ಚರವಾದಂತಾಗಿ ಮೆಲ್ಲಗೆ ಅವರನ್ನು ಬದಿಯ ಕಾಲು ದಾರಿ (foot-path) ಗೆ ಸರಿಸುತ್ತ—"ಜನ ನೋಡ್ತಾರೆ, ಆಚಾರ ಈ ಕಡೆ ಬನ್ನಿ, ಫುಟ್ ಪಾಥ್ ದ ಮೇಲೆ" ಅಂದೆವು

ಪರಿಸ್ಥಿತಿಯನ್ನು ಹತೋಟಿಯಲ್ಲಿ ತಂದುಕೊಂಡಮೇಲೆ ಆಚಾರ್ಯರ ನಕ್ಕದ್ದು ಯಾಕೆ ಎಂದು ಕುತೂಹಲದಿಂದ

"ಆಚಾರ್ಯರೆ—"

"—ನೀವ್—"

"—ನಕ್ಕದ್ದ್—"

" ಯಾಕ್ ? " ಎಂದು ಸಾಮೂಹಿಕವಾಗಿಯೇ ಕೇಳಿದೆವು

" ಅಲ್ಲರೊ, ನಾನು ಮೂರ್ಹೊತ್ತು ಊಟ ಮಾಡ್ತೀನಿ ಅಂದಿರಿಲ್ಲ ? ಅದಕ್ಕೆ ನಕ್ಕದ್ದು ! ಹ ಹ ! ನನಗೆ ಟೈಫಾಯ್ಡ್ ಅಂತ ! ಹ ಹ ಹ ! "

" ಅಂದ್ರೆ....ನಿಮ್ಗೇನಾಗಿತ್—? "

" ಅಲ್ಲ—ಅಂದ್ರೆ—ಮೂರ್ಹೊತ್ತು ಊಟ—"

" ಯಾರೋ ಅಂದ್ರು ಕನ್‌ವಲೀಸೆಂಟ್-ಅಂತ–" ಆಚಾರ್ಯರು ಮತ್ತೆ ಗಹಗಹಿಸಿದರು

" ನಾನು ಅನ್ನಸತ್ಯಾಗ್ರಹ ಮಾಡೋವ ಇದ್ದೀನಿ " ಎಂದು ಆಚಾರ್ಯರು ಸಾರಿದರು

ಅನ್ನಸತ್ಯಾಗ್ರಹ ? ಆ ಸಂದರ್ಭವೆಲ್ಲಿ ಬಂತು ? ಅನ್ನ–ಸತ್ಯಾಗ್ರಹ ಅಂದರೆ ಊಟವನ್ನು ಬಿಡುವುದಲ್ಲವೆ ?

" ಹೌದು ಅದಕ್ಕೇ ಮುಂಚೆ ಅದರ ತಯ್ಯಾರಿಗೇ ಅಂತ ಅನ್ನಸಂಗ್ರಹ ನಡೆಸಿದ್ದೆ ಇಷ್ಟು ತಿಳಿಯೋದಿಲ್ಲವಲ್ಲ ನಿಮಗೆ ? ತ್ಯಾಗದ ಮುಂಚೆ ಸಂಗ್ರಹ ಬೇಕಲ್ಲವೇ ? ಇಲ್ಲದ್ದರ ತ್ಯಾಗ ಮಾಡೋದು ಹ್ಯಾಂಗ ?"

ಆಚಾರ್ಯರ ಅಪಾರವಾದ, ಆಳವಾದ ಬುದ್ಧಿವಂತಿಕೆಯ ಅನುಭವವಿದ್ದುದರಿಂದ ನಾವು ಆ ಮಾತನ್ನು ತಿಳಿದುಕೊಳ್ಳುವ ಗೋಜಿಗೇ ಹೋಗಲಿಲ್ಲ. ಅದರ ಬದಲಾಗಿ,

ಅದಿರ್ಲಿ. ಈ ಅನ್ನಸತ್ಯಾಗ್ರಹ ಯಾಕೆ ಅನ್ನೋದಾದರೂ ಹೇಳಿರಿ " ಎಂದೆವು " ಅಥವಾ–ಎಲ್ಲಾರಿಗೂ ಅನ್ನ ಸಿಕ್ಕಲಿ ಅನ್ನೋದಕೆ ನಿಂ ಅನ್ನಸತ್ಯಾಗ್ರಹವೊ ?"

" ಅನ್ನ–ಅನ್ನೋದು ಒಂದು ಐಹಿಕ ವಸ್ತು, ಎಲ್ಲ ಐಹಿಕಗಳಂತೆ ಅದೂ ಒಂದು ಕ್ಷಣಿಕ ವಸ್ತು. ಕ್ಷಣಿಕ ವಸ್ತುವನ್ನು ಬಯಸುವುದು ಭಾರತೀಯ ಸಂಸ್ಕೃತಿಯಲ್ಲ. ಭಾರತೀಯ ಸಂಸ್ಕೃತಿ ಎಂಥದು ! ಗೊತ್ತಿದೆ ಏನು ? "

" ಅದು ಪುರಾತನ " ಎಂದ ಒಬ್ಬ.

" ಏನು ? " ಗದ್ದರಿಸಿದರು ಆಚಾರ್ಯರು.

" ಅದು ಸರಾತನ " ಎಂದ ಇನ್ನೊಬ್ಬ.

" ಹುಚ್ಮುಂಡೇಗಂಡ !" ಎಂದರು ಆಚಾರ್ಯರು.

" ಅಂಥಾದ್ದಲ್ಲ ನಂ ಸಂಸ್—" ಮೂರನೆಯವರ ಯತ್ನ.

" ನಿನ್ನ ತಲೆ ! ಆ ಪದವಿ ಕೊಟ್ಟದ್ದು ನಿಮಗೆ, ಸಂಸ್ಕೃತಿಗಲ್ಲ, " ಸನಾತನ " ಅನ್ನೋದು ಗೊತ್ತಿಲ್ಲವರು ಸಂಸ್ಕೃತಿ ಬಗ್ಗೆ ಮಾತಾಡ್ತಾರೆ !" ಎಂದರು ಆಚಾರ್ಯರು,

" ನಂ ಸಂಸ್ಕೃತಿ-ಸನಾತನ ಅನ್ನೋದು ಸರ್ವಶ್ರುತ, ಆಚಾರ್ಯರೆ. ಆದಿರ್ಲಿ, ನಿಂ ಅನ್ನಸತ್ಯಾಗ್ರಹ—" ಎಂದು ನಾನು ಬಾಯ್ದೆರೆಯುವಷ್ಟರಲ್ಲಿ—

" ಗೊತ್ತು ನಿನ್ನ ಬುದ್ಧಿವಂತಿಕೆ!" ಎಂದು ನಕ್ಕು ಆಚಾರ್ಯರು, " ನನ್ನ ಅನ್ನಸತ್ಯಾಗ್ರಹದ ಉದ್ದೇಶ ಏನು ಅಂತೀಯಲ್ಲ? ಹೇಳ್ತೀನಿ, ಕೇಳು. ' ಬರೋ ಅಯ್ದು ವರ್ಷಗಳೊಳಗೆ ನಿಂ ಡೆಮಾಕ್ರಸಿ ನಂ ಪಾಲಿಗೆ ಬರಲಿ ' ಅನ್ನೋದೇ ನನ್ನ ಉದ್ದೇಶ. ತಿಳಿತೇನು ?"

ಬಾಯ್ದೆರೆದು ನಿಂತೆವು, ತಲೆಗಳನ್ನು ತೂಗುತ್ತ ನಿಂತೆವು.

' ತಿಳಿದಿಲ್ಲ ' ಎಂದವು ತೆರೆದ ಬಾಯಿಗಳು.

' ತಿಳಿದಿಲ್ಲ ಎಂಬುದು ಮಾತ್ರ ತಿಳಿದಿದೆ ' ಎಂದವು ತೂಗುವ ತಲೆಗಳು.

ಆಚಾರ್ಯರು ನಮ್ಮನ್ನು ನೋಡಿಯೂ ಕಾಣದವರಂತೆ ತಮ್ಮ ಮಾತನ್ನೇ ಮುಂದುವರಿಸಿದರು.

" ನೋಡಿರಿ, ಈಗ ನಂ ದೇಶದಲ್ಲಿ ಅಯ್ದು ಅಯ್ದು ವರ್ಷಗಳ ಒಂದೊಂದು ಪ್ಲ್ಯಾನ್ ನಡಿತಾ ಇದೆ. ಹೌದಲ್ಲೋ ? ಮೊದಲನೇ ಪ್ಲಾನ್‌ದೊಳಗೆ ಸ್ವಾತಂತ್ರ್ಯ ಯುದ್ಧದಲ್ಲಿ ಸ್ವಾರ್ಥತ್ಯಾಗ ಮಾಡಿದವರಿಗೆ ಸಂಬಳ–ಹುದ್ದೆ ದೊರೆತುವು. ಹೌದಲ್ಲೋ ? ಮುಂದಿನ ಪ್ಲಾನ್‌ದೊಳಗೆ ಅಭಿವೃದ್ಧಿ ಮಂಡಳಗಳನ್ನು ಮಾಡಿ ತ್ಯಾಗ ಮಾಡಿದಮೇಲೂ ಕೆಲವು ಜನರಿಗೆ ಇನ್ನೂ ಸ್ವಾರ್ಥ ಉಳಿದಿತ್ತಲ್ಲ, ಅಂಥವರಿಗೆ ಹುದ್ದೆ, ವೇತನ, ಭಡ್ತಿ ದೊರೆತುವು. ಅಂತೂ ಬ್ರಾಹ್ಮಣ, ಕ್ಷತ್ರಿಯ ಎರಡೂ ಸ್ವಭಾವದವರ ವ್ಯವಸ್ಥೆ ಆಯಿತಲ್ಲ ? ಇನ್ನು ಮೂರನೆಯ ಪ್ಲ್ಯಾನ್ ವೈಶ್ಯರಿಗಾಗಿ ಅಂತ ಹೇಳಿ—ಕಂಟ್ರೋಲು, ಬ್ಲ್ಯಾಕ್ ಮಾರ್ಕೆಟು ಇಂಥವಗಳ ಏರ್ಪಾಟು ಮಾಡಿ ಮೂರನೆಯ ಪ್ಲ್ಯಾನ್‌ನಲ್ಲಿ ವೈಶ್ಯರಿಗೆ ಸುಖ-ಸಂಪತ್ತು ದೊರಕೋ ಹಾಗೆ ಮಾಡಿದಿವಿ. ಇನ್ನು ನಡೆಯೋದು ನಾಲ್ಕನೇ ಪ್ಲ್ಯಾನ್ ಉ. ಹೌದಲ್ಲೋ ? ಈ ಪ್ಲ್ಯಾನ್‌ನಲ್ಲಿ ಪೂರ್ತಿಯಾಗಿ ಶೂದ್ರರಾದ ನಮ್ಮಂಥೋರಿಗೆ ಮೀಸಲಾಗಿರಿಸಬೇಕು. ಅನ್ನೋದನ್ನ ಸರಕಾರಗಳ ಲಕ್ಷ್ಯಕ್ಕೆ ತರಲು ನನ್ನ ಅನ್ನಸತ್ಯಾಗ್ರಹ. ತಿಳೀತೇನು? " ಎಂದು ಚುನಾವಣೆಯ ಹುರಿಯಾಳಿನಂತೆ ಕಳಕಳಿಯಿಂದ ಕೇಳಿದರು. " ನಂ ಕಾನ್‌ಸ್ಟಿಟ್ಯೂಶನ್ ಡೆಮಾಕ್ರಾಟಿಕ್ ಆಗಿದ್ದರೆ ಈ ಪ್ಲ್ಯಾನ್‌ನಲ್ಲಿ ಕಾನ್‌ಸ್ಟಿಟ್ಯೂಶನದ ಪಾಲು ನಮಗೆ ಸಲ್ಲತಕ್ಕದ್ದು " ಎಂದು ಇದಿರು ಮೇಜು ಇಲ್ಲದ್ದಕ್ಕೆ ನಮ್ಮ ಎದೆಗಳನ್ನು ಗುದ್ದಿ ಹೇಳಿದರು. " ತಿಳೀತೇನು ?" ಎಂದರು.

ನಿಮಗಾದರೂ ತಿಳೀತೇನು ? —ಶ್ರೀರಂಗ

# ಸೌಂದರ್ಯ ರಾಯಭಾರ

[ವಿಶ್ವಸುಂದರಿ ರೀಟಾಫಾರಿಯಾ ವೀಟ್ನಾಮಿಗೆ ಹೋದರಂತೆ–ಸುದ್ದಿ ಕ್ಷಾಮ ಪರಿಹಾರ ನಿಧಿಗೆ ಹಣ ಕೂಡಿಸಲು ಅವರನ್ನು ನಮ್ಮ ಸರಕಾರ ಕೇಳುವುದಂತೆ– ಇನ್ನೊಂದು ಸುದ್ದಿ]

---

ಛಪ್ಪನ್ನೈವತ್ತಾರು ದೇಶಗಳ ಚಲುವೆಯರನೆಲ್ಲ
ಮೆಟ್ಟಿ ಮೇಲ್ಬಂದ ಮುಗುದೆ ನಾ ಮಿಸ್ ವರ್ಲ್ಡ
ಚಲುವು ಸೊಂಪಿನ ಬೆಡಗು ವೈಯಾರದ
ಕಾಂತಿ ಕೋಮಲತೆಯ ಖನಿ

ಎನ್ನ ಸಾನ್ನಿಧ್ಯದಲಿ ಮರೆಯಿರಿ G. I ಗಳೇ
ನಿಮ್ಮ ಹೊಟ್ಟೆ ಕರುಳುಗಳ ಬೇನೆಯನು
ನೀವೆನ್ನ ದೇಹವಿನ್ಯಾಸ ರೇಖೆಯನು ನೋಡಿ–
ವೀಟ್ನಾಮಿನಾಕಾಶಯಾನದ ಬೇಗುದಿಯ

ಬೇಸರಕೆ, ನೋವಿಗಿದು ಹಾಕುವುದು ಪೋಡಿ
ವೀಟ್ಕಾಂಗು ಗೆರಿಲ್ಲಾಗಳುರುಳಿಸಿಹ
ಶೇಬರುಗಳು, ಕೈಸೆರೆ ಹಿಡಿದಿಹ ಸೈನಿಕರ ಸಂಖ್ಯೆಯ
ಮರೆಯಿರೆನ್ನ ವೈಟಲ್ ಸ್ಟ್ಯಾಟಿಸ್ಟಿಕ್ಸ್ ನೆನೆದು

[ಅದು : 36-24-35]

ನಿಮ್ಮ ಮನವನರಳಿಸಲೆಂದು ಬಂದಿಹೆನಿಲ್ಲಿ
ಎಷ್ಟೊಂದು ಕಮನೀಯವೆನ್ನೀಕ್ಕಶಕಟಿ!
[ಬಿಹಾರದ ಮಂದಿಗಿದಕಿಂತಲೂ ಬಡನಡು,
ಬಾಯಾರಿ ಒಣಗಿ ಬಿರಿದು ಹೋಗಿಹ ತುಟಿ]

* * *

ಎನ್ನ ಚಲುವಿನ ಗುಟ್ಟೇ? ಗುಟ್ಟೇನು ಇಲ್ಲ–
ತಿನ್ನುವೆನು P.L. 480 ಚಪಾತಿ
[ಅದು ಬಾರದಿದ್ದರೇ ನಮಗೆ ಗತಿ ?]

ಸ್ವವಿಷಯ: ಆಗಬೇಕೆಂದಿರುವವನ ಹೆಸರು ಲೋಬೋ-
ಆಸ್ಸಾಮಿನಲಿ ಟೀ ತೋಟದೊಡೆಯ
ಬಿಹಾರಿನ ಹಸಿದ ಜನ ಮಾಡುತಿಹರು ಲೋಬೋ ಲೋಬೋ]

* * * *

ನೋಡಿರೀ ಚೆಂದದ ಸೀರೆಯುಡಿಗೆಯ
ಇದೇ ಬಲು ಸೊಗಸು ಎನಗೆ, ಬಿಕಿನಿಗಿಂತ

* * * *

ಬಲು ತಮಾಷೆ ನಿಮ್ಮ ವಿದೂಷಕ ಬಾಬ ಹೋಪ
ಬಲು ಚುರುಕು, ಹಾಸ್ಯಕ್ಕಿಲ್ಲ ಕೊನೆಗಾಲ
[ಮರೆಯಾದಿರಿ ಬಿಹಾರದಲಿ ಬರಗಾಲ]
ಊರಿನಲ್ಲಿ ನಾಮಾಡಬೇಕವರ ಕಣ್ಗೆ ಹಬ್ಬ
[ನಾನಿಲ್ಲಿ ಬಂದಿಹುದವರಿಗೆ ಕಡುಕೋಪ]
ದಯವಿಟ್ಟು ತುಂಬಿಕೊಡಿರೀ ಚಂದಾ ಡಬ್ಬ

—ಎಂ. ಎಸ್. ಕೆ.

---

## ಅ ಭ್ಯಾ ಸ

" ಸೀಬಿ, ಸೀಬಿ, ಸೀಬಿ " ಎಂದರೆ ಕೊತ್ತಿ
ಮನೆಯಾಗೆ ಬರತಾದ,
" ಬಾಮ್ಮ, ಬಾ, ಬಾ, " ಅಂದ್ರೆ ಆಕಳು
ಗೊಂತ ಸೇರತಾದ
" ಛಿ-ಛಿ, ಛೀ, ಛೀ ಅಂದರ ಶುನಕ
ಹೊಸಲಾಚೆ ಹೋಗತಾದ
" ಜನಗಣಮನ, " ಬಂತಾದ್ರೆ ಜನತೆ
ಥಿಯೇಟ್ರನಿಂ ಕಾಲು ಕೀಳ್ತಾದ

—ಎಂ. ಎಸ್. ಕೆ.

# ದ್ವಂದ್ವ

ಎಂ. ಜಿ. ಆರ್. ಎಂ. ಆರ್. ರಾಧ ಇವರ ನಡುವೆ ನಡೆದ ವಿಫಲ ಪಿಸ್ತೂಲು ದ್ವಂದ್ವದ ಬಗ್ಗೆ ಕೇಳಿ ನನ್ನ ಎದೆಗೆ ಡಂಗು ಬಡಿದು ಹೋಯಿತು. ದಶಕಗಳಿಂದ ಪ್ರಸಿದ್ಧರಾದ ಈ ಘಟಾನುಘಟಿಗಳು ನೂರಾರು ತಮಿಳು ಸಿನಿಮಾಗಳ ಪರದೆಯ ಮೇಲೆ ನಡೆಸಿದ ಲಟ್ಟಾ-ಪಟ್ಟಿ, ಹಣಾಹಣಿ, ಕುದುರಾಕುದುರೆ, ಕತ್ತಿವರಸೆ ಇತ್ಯಾದಿ ಒಂದಾದಮೇಲೊಂದು ನನ್ನ ಕಣ್ಣಿನ ಪಲಕಗಳಮುಂದೆ ಸಿನಿಮದ ರೂಪದಂತೆ ರೀಲು ರೀಲಾಗಿ ಸರಿಯಿತು

ಆದರೆ ನನಗೆ ಒಂದು ಸಂತೋಷ. ದೇಶದ ಚುನಾವಣೆ ಸಂಬಂಧದಲ್ಲಿ ನಮ್ಮ ಪವಿತ್ರ ಭಾರತ ಭೂಮಿಯಲ್ಲಿ ಯಾರೂ ಇದುವರೆಗೆ ಪಿಸ್ತೂಲಿನಿಂದ ಹೊಡೆದಾಡಿರಲಿಲ್ಲ. ಬೇರೆ ಪಶ್ಚಿಮೀ ದೇಶಗಳವರಂತೆ ಆ ಕೀರ್ತಿ ಈಗ ನಮ್ಮ ದೇಶಕ್ಕೂ ಸಂದಾಯವಾದುದು ಕೇಳಿ ಬಲು ಹೆಮ್ಮೆಯಾಯಿತು ನಮ್ಮ ಪವಿತ್ರ ಭೂಮಿಯು ಗಾಂಧಿ–ನೆಹರೂ ನಾಡಿನ ಶಾಂತಿ ಪತಾಕವನ್ನು ಹಿಮಾಲಯದಮೇಲೆ ಹಾರಿಸಿದ ಕೀರ್ತಿಯನ್ನು ಮೊಟಕು ಮಾಡುವಂತಹ ಸಂದರ್ಭ ಜರುಗಿದ್ದು ದೇಶ ವಿದೇಶಗಳಲ್ಲಿನ ಪತ್ರಿಕೆಗಳಲ್ಲಿ ಪ್ರಚಾರವಾದುದು ಕೇಳಿ ನಿಜಕ್ಕೂ ಯಾವ ಭಾರತೀಯನೂ ರಸ್ತೆಯಮೇಲೆ ನಡೆಯುತ್ತ ತಲೆ ಯೆತ್ತತಕ್ಕದ್ದೇ ಸರಿ !

ಅದೆಲ್ಲಾ ಇರಲಿ, ಆದರೆ ನನಗೆ ಈ ಬಗ್ಗೆ ಹಲವಾರು ಸಮಸ್ಯೆಗಳು ತೋರಿವೆ ನನ್ನ ತಲೆಯಲ್ಲಿ ಕೆಲವು ಸಂಶಯಗಳು ಉದ್ಭವಿಸಿವೆ. ಅಲ್ಲ ನೂರಾರು ಸಿನಿಮ ಗಳಲ್ಲಿ ಸಾವಿರಾರು ವೀರರನ್ನು ಕೇವಲ ತಮ್ಮ ಭುಜಬಲದಿಂದಲೇ ಉರುಳಿಸಿದ ಏಕೈಕ ವೀರ ಅಪ್ರತಿಮ ಶೂರರಿಬ್ಬರೂ ಪಿಸ್ತೂಲಿನಿಂದ ಹತ್ತಿರ ನಿಂತು ಸುಲಭ ವಾಗಿ ಹೊಡೆದಾಗ ಯಾರು ಸಾಯಲಿಲ್ಲವೇಕೆ ? ಗುರಿ ಎದೆಗೋ, ಹೊಟ್ಟೆಗೋ ಬೀಳುವುದರ ಬದಲು ಕಿವಿಗೆ ತಗುಲಿದ್ದೇಕೆ. ಇದರಲ್ಲಿ ಏನೋ ಐಬಿದೆಯೆಂದು ನನ್ನ ಅಭಿಪ್ರಾಯ ಸಿನಿಮಾಗಳಲ್ಲಿ ಕೊಡದಾಟಕ್ಕೆ ಬಹಳ ಒಳ್ಳೆ ತರಪೇತನ್ನು ಕೊಡುತ್ತಾರೆಂದು ನಂಬಿದ್ದೆ; ಇಂತಹವರು ನಿಜವಾಗಿಯೂ ಕತ್ತಿವರಸೆ ಮುಂತಾದ ಯುದ್ಧವಿಚಾರಗಳಲ್ಲಿ ನಿಪುಣರೆಂದು ತಿಳಿದಿದ್ದೆ. ಅವರು ಪರದೆಯ ಮೇಲೆ ನಡೆಸುತ್ತಿದ್ದ ಪೌರುಷಯುತ ಹೋರಾಟದಿಂದ ನಾನಿರಲಿ ನನ್ನಂತಹ

ಸಾವಿರಾರು ಲಕ್ಷಾಂತರ ಜನ ಸ್ಫೂರ್ತಿ ಪಡೆದಿದ್ದಾರೆ; ಸೀಟಿನಮೇಲೆ ನಿಗರಿ ನಿಂತಿದ್ದಾರೆ; ರಕ್ತ ಕುದಿಸಿಕೊಂಡಿದ್ದಾರೆ; ಹಲ್ಲು ಕಡಿದಿದ್ದಾರೆ "ಅಡಿ....ನಲ್ಲ ಆಡಿ" ಎಂದು ಖಳನಾಯಕ ಕೆಳಗೆ ಬಿದ್ದಿರುವಾಗ ವಿಜೇತ ವೀರನನ್ನು ಪ್ರೋತ್ಸಾಹಿಸಿದ್ದಾರೆ; ಹುರುಪಿಸಿದ್ದಾರೆ ಅಷ್ಟೇ ಅಲ್ಲ ಹೊಡೆದಾಟವನ್ನು ಇನ್ನು ಚೆನ್ನಾಗಿ ಕಲಿತಿದ್ದಾರೆ ಹೇಳಿಕೊಡುವಷ್ಟು ಯಾಕೆ ನನ್ನ ಕೈಯಲ್ಲಿ ಅದೇ ಪಿಸ್ತೂಲನ್ನು ಕೊಟ್ಟಿದ್ದರೆ ಎದೆಗೆ ಸರಿಯಾಗಿ ಗುರಿಯಿಟ್ಟು ಹೊಡೆದು ಕೊಲ್ಲುತ್ತಿದ್ದೆ ಹ್ಞ್ಞ ಆ ನಂಬಿಕೆ ನನಗಿದೆ! ಆ ಧೈರ್ಯವಿದೆ!! ಆ ಹುಮ್ಮಸ್ಸಿದೆ!!!

ಹಾಗಿರುವಾಗ ಈ ದ್ವಂದ್ವ ವಿಫಲವಾದುದೇಕೆ? ಇದರಿಂದ ನನ್ನ ಮನಸ್ಸಿನ ಮೇಲಾಗಿರುವ ಪರಿಣಾಮ ಗೊತ್ತೆ? ಇಷ್ಟು ವರ್ಷಗಳೂ ನಾನು ಯಾರನ್ನು ಧೀರಾಧಿಧೀರರೆಂದುಕೊಂಡಿದ್ದೆನೋ ಯಾರ ಬಗ್ಗೆ ನನಗೆ ನಿದ್ದೆ ಕನಸುಗಳಲ್ಲಿಯೂ ಹೆದರಿಕೆ ಇತ್ತೋ ಅವರ ಬಗ್ಗೆ ಏಕ್‌ದಂ ಗೌರವ–ಪಾತವಾಗಿ ಬಿಟ್ಟಿದೆ. ಅವರು ಧೀರತ್ವ ಶೂರತ್ವಗಳಬಗ್ಗೆ ಗುರಿ ಶೀಲತೆಯ ಬಗ್ಗೆ ಇದ್ದ ನಂಬಿಕೆಯೇ ಹೋಗಿ ಬಿಟ್ಟಿದೆ ಅಥವ ಇದೂ ಒಂದು ಬಗೆಯ ಚುನಾವಣೆ–ಸ್ಟಂಟೋ ಇದ್ದರೂ ಇರಬಹುದು ಏಕೆಂದರೆ ಇದರಿಂದ ಅವರ ಸಾವಿರಾರು ಹಿಂಬಾಲಕರಿಗೆ ನಿದ್ದೆ ಮಾಡುತ್ತಿರುವವರಿಗೆ 'ಷಾಕ್ ಟ್ರೀಟ್ ಮೆಂಟ್' ಇರಬಹುದು

ಬಿ. ನ. ಮೂರ್ತಿ

---

ಹೊಸ ಕಮ್ಪ್ಯೂಟರ್ ಯಂತ್ರವೊಂದು ಮನುಷ್ಯನು ಮಾಡುವ ಎಲ್ಲ ಕೆಲಸಗಳನ್ನು ಮಾಡುತ್ತದಂತೆ. ಆದರೆ ಆಲೋಚನೆಯನ್ನು ಮಾತ್ರ ಮಾಡಲಾರದಂತೆ.

—ಇದೇನು ಹೊಸದು? ನಮ್ಮ ರಾಜಕಾರಣಿಗಳು ಇಂತಹವನ್ನೇ ನಂಬಿ ಚುನಾವಣಾ ಅಖಾಡಾಕ್ಕೆ ಎಂದಿನಿಂದಲೂ ಇಳಿಯುತಿದ್ದಾರೆ!!

* * * *

ಮಾನವ ಸಂಸ್ಕೃತಿಯು ಚುಸ್ಪಾಚೂರಾಗುತ್ತಿದೆ ಎಂದು ಅವಧೂತರೊಬ್ಬರ ಅಂಬೋಣ.

—ಸುಳ್ಳು ಚೂರು ಚೂರುಗಲ್ಲ! ಕಣಕಣವಾಗಿ ಅಣು ಅಣುವಾಗಿ ಧೂಳಾಗುತ್ತಿದೆ.

* * * *

# ಸಂತೋಷದ ಗುಟ್ಟು

ಪ್ರಾಣೇಶ್‌ನಿಗೆ ಅಸೆಂಬ್ಲಿ ಟಿಕೆಟ್ ಸಿಗಲಿಲ್ಲವೆಂಬ ಕಾರಣಕ್ಕಾಗಿ ಅವನನ್ನು ಅಭಿನಂದಿಸಲು ನಾವೆಲ್ಲ ಒಂದು ಪಾರ್ಟಿ ಇಟ್ಟುಕೊಂಡೆವು. ಒಳ್ಳೆಯ ಈ ಪ್ರಾಣಿ, ಆತ್ಮ ಸಾಕ್ಷಿ ಕಳೆದುಕೊಂಡು ತಕ್ಕು ವಂಚನೆಗಳಿಗಿಳಿಯುವುದು ತಪ್ಪಿತಲ್ಲ ಎಂದು ಸ್ನೇಹಿತರಿಗೆಲ್ಲ ಸಮಾಧಾನ. ಮುಖ್ಯ ಅತಿಥಿಯ ಬರವನ್ನು ಕಾಯುತ್ತ ನಾವೆಲ್ಲರೂ ಹರಟುತ್ತಿರುವಾಗ ಗೋಪಣ್ಣನ ಕಣ್ಣಿಗೆ ಬಿತ್ತು L. I. C. ಯವರ ೬೯ರ ಕ್ಯಾಲೆಂಡರು. (ಬಿರುಕು ಮುಚ್ಚುಕ್ಕೆ ಅಂತ ನಾವು ಅದನ್ನ ನೇತುಹಾಕಿದ್ದೆವು) ಆದನ್ನು ಕಂಡು "ಎಷ್ಟು ಚೆನ್ನಾಗಿದೆ ನೋಡ್ರೋ" ಎಂದ ಗೋಪಣ್ಣ. ನಮ್ಮೆಲ್ಲರ ದೃಷ್ಟಿ ಆ ಕ್ಯಾಲೆಂಡರ್ ಚಿತ್ರದ ಕಡೆಗೆ ಹರಿಯಿತು.

ಹೌದು, ಸೊಗಸಾದ ಚಿತ್ರ ಅದು. ಯಾರೋ ಜಾಣರು ಹಳ್ಳಿಗಾಡಿನ ಪುಟ್ಟ ಸಂಸಾರವೊಂದರ ಚಿತ್ರವನ್ನು ಕ್ಯಾಮರಾದಲ್ಲಿ ಸೆರೆಹಿಡಿದಿದ್ದರು. ತಂದೆ ತಾಯಿ, ಇಬ್ಬರು ಗಂಡು ಮಕ್ಕಳು, ಒಂದು ಹುಡುಗಿ ಸಂತಾನ ನಿಯಂತ್ರಣ ಶಾಖೆಯವರೂ ಕೂಡ ಕಂಡು ಬಾಯಿ ಬಿಡುವಂತಹ ಪುಟ್ಟ ಸಂಸಾರ. ಗುಡ್ಡಗಾಡಿನ ಹಿನ್ನೆಲೆ ಗುಡ್ಡಗಾಡು ಜನರ, ಆಧುನಿಕತೆಯ ಸೋಂಕಿಲ್ಲದ ವೇಷಭೂಷಣ ಎಲ್ಲಕ್ಕೂ ಮಿಗಿಲಾಗಿ ಆ ಹರೆಯದ ದಂಪತಿಗಳ ಮುಖದಲ್ಲಿ ಮಿನುಗುತ್ತಿದ್ದ, ದುಃಖವೆಂದರೇನೆಂದು ಕಂಡೇ ಇಲ್ಲವೋ ಎಂಬಂತಹ, ಮಂದಹಾಸ.

ಚಿತ್ರಕ್ಕೆ ಷಹಭಾಷ್ ಕೊಟ್ಟದ್ದೇನೋ ಸರಿ. ಆದರೆ ನಮ್ಮ ವಿ. ಮೂ. ಆಂಟು (ಏಜಂಟು ಸ್ವಾಮಿ!) ವೇದಮೂರ್ತಿಗೆ ತನಗೇ ಷಹಭಾಷ್ ದೊರೆತಂತಾಯಿತು.

ಆತ ಉಬ್ಬಿ ಚಿತ್ರದ ಕಡೆಗೆ ಬೊಟ್ಟು ಮಾಡಿ "ಆ ಜನಗಳ ನಿರ್ಮಲ ನಗೆಯ ಗುಟ್ಟು ಏನು ಹೇಳಿ ನೋಡೋಣ" ಎಂದು ಸವಾಲು ಹಾಕಿದ.

ಆತ ಏನು ಉತ್ತರ ನಿರೀಕ್ಷಿಸಿದ್ದನೋ ಅಷ್ಟರಲ್ಲಿ ಒಳಗೆ ನುಗ್ಗಿದ್ದ ನಮ್ಮ ಮುಖ್ಯ ಅತಿಥಿ ಪ್ರಾಣೇಶ್ ವೇದಮೂರ್ತಿಯ ಹೆಗಲಮೇಲೆ ಕೈಯಿಡುತ್ತಾ 'ಆ ಜನಗಳ ಸಂತೋಷದ ಗುಟ್ಟೆ? ಗುಟ್ಟೇನಿದೆ ಅದರಲ್ಲಿ. ಆ ಗುಡ್ಡಗಾಡು ಜನರು ಇನ್ಶೂರ್ ಮಾಡಿಲ್ಲ. ಅಷ್ಟೆ." ಎನ್ನಬೇಕೆ!

"ಭಲೆ ಭಲೆ" ಎನ್ನುತ್ತಾ ಎಲ್ಲರೂ ಪ್ರಾಣೇಶನ ಬೆನ್ನಿಗೆ ಒಂದೊಂದು ಬಾರಿಸಿದೆವು. ಇಂಥ ನಗೆಚಾಟಿಯನ್ನು ಹಾರಿಸಬಲ್ಲ ಈ ಪ್ರಾಣಿ ಅಸೆಂಬ್ಲಿ ಸೇರಿ ಕಿಸೆಯ ದಾಸನಾಗುವುದು ತಪ್ಪಿತಲ್ಲ ಎಂದು ಸಂತಸಗೊಂಡೆವು.

# ಪಾರು ಮಾಡೋ ತಂದೆ

●

ಪಾರು ಮಾಡೋ ತಂದೆ ಪಾರುಮಾಡೊ. ‖ ಪ ‖
ಓಟು ಹಂಟರ (Hunter) ಕಾಟದಿಂದ
ಪಾರು ಮಾಡೊ ತಂದೆ, ಪಾರುಮಾಡೊ ‖ ಅ-ಪ ‖

ಬೀದಿಯಲಿ ಹಿಡಿಯುವರು
ಕಿವಿಯ ಕೊರೆಯುವರು
ಆದರವ ತೋರಿಸುತ
ಬಿಡದೆ ಬೆಂಬತ್ತುವರು
ಓಟು ಬೇಡುವರಾಟ ಸಾಕಯ್ಯಾ ತಂದೆ ‖ ೧ ‖

ಓದು ಬರಹಕ್ಕೆಲ್ಲ
ವ್ಯಾಧಿಯೇ ಆಗಿಹರು
ಬೀದಿ ಜಗಳವ ನಡೆಸಿ
ಬೈದಾಡುವರು ಬರಿದೆ
ಏನು ವಿಧಿಯೋ ಇವರ ಕಾಟ ನಿಲ್ಲಿಸೊ ತಂದೆ ‖ ೨ ‖

ದಂಡವೆತ್ತುವ ಕೈಯನೆ
ಮುಂಡೆಗೇರಿಪರು ಹಲ್ಕಿರಿದು
ಕಂಡಕಂಡೆಡೆಯಲ್ಲಿ
ಮೊಂಡುತನ ಹೂಡುವರು
ಭಂಡರಾಟದಿಂ ಬದುಕಿಸೋ ತಂದೆ ‖ ೩ ‖

ಮದೆಗಿಟ್ಟು ಬೆಂಕಿಯನು
ಆರಳ ನಾರಿಪರಯ್ಯ
ಮಧುರ ವಚನವನಾಡಿ
ಮರುಳು ಮಾಡುವರು
ಆರೆಗಳಿಗೆಯೂ ಬಿಡದ ತರಲೆಯಿಂ ಬಿಡಿಸಯ್ಯ ‖ ೪ ‖

ಹೊಳೆಯು ದಾಟುವ ಕ್ಷಣದಿ
ಅಂಬಿಗನೆ ಶರಣಯ್ಯ
ದಾಟಿದಾಕ್ಷಣ ಅವನ ನೋಡದೆಯೂ ನಡೆವವರು
ಗಾಳಿಮಾತಾಡುವೀ ಜನರ ಹಾವಳಿಯು ನಿಲಿಸಯ್ಯ ॥ ೫ ॥

ಐದು ವರ್ಷಕ್ಕೊಮ್ಮೆ
ಹಾಯ್ದು ಬರುವಿ ಪಿಡುಗು
ಬಯ್ದು ಬಡಿವುದು
ಬದುಕ ಬೀಳುಮಾಡಿ
ಕಾಯ್ದು ಕನಿಕರಿಸೊ ತಂದೆ, ಪಾರುಮಾಡೊ ॥ ೬ ॥

---

—ನೀಲತ್ತಹಳ್ಳಿ ಕಸ್ತೂರಿ



ಧರಣಿಮಂಡಲ ಮಧ್ಯದೊಳಗೆ
ಎಲ್ಲೆಲ್ಲೂ ಇದೇನೇನೆ !

# ಪೋಲೀಸ್ ಡಾಗ್ ಶೇಷಪ್ಪ

★

ಮುಳ್ಳೂರಿನ ಮುಳ್ಳಾಂಬ ಪಾರ್ಕಿನಲ್ಲಿ ಮುದುಕರೊಬ್ಬರು ರಬ್ಬರ್ ಚೆಂಡನ್ನು ಕೈಬೀಸಿ ಎಸೆದರು. ಅದನ್ನು ಹಿಡಿಯಲು ಯಾವ ನಾಯಿ ಓಡುವುದೋ ಎಂದು ಕಾತುರನಾಗಿ ನೋಡಿದ ಮುದ್ದೂರಾಯು. ಆದರೆ ಚೆಂಡಿನ ಹಿಂದೆ ಓಡಿದ್ದು ಯಾವ ಆಲ್‌ಶೇನ್ ಶುನಕನೂ ಅಲ್ಲ, ಇಬ್ಬರು ಸಣ್ಣ ಹುಡುಗರು. ಚಂಗನೆ ನೆಗೆದು ಓಡಿ ಚೆಂಡನ್ನು ಬಾಯಲ್ಲಿ ಕಚ್ಚಿ ಹಿಡಿದು ತಂದರು. ಆ ಮುದುಕ ಆ ಹುಡುಗರ ಬೆನ್ನನ್ನು ಚಪ್ಪರಿಸಿ ಅವರ ಬಾಯಿಂದ ಚೆಂಡನ್ನು ಬಿಡಿಸಿಕೊಂಡು ಮತ್ತೊಮ್ಮೆ ಎಸೆದ. ಮತ್ತೊಮ್ಮೆ ಓಡಿದರು ಹುಡುಗರು ಚೆಂಡನ್ನು ತರಲು. ಮುದ್ದೂರಾಯು ಈ ಆಶ್ಚರ್ಯವನ್ನು ನೋಡುತ್ತಾ ಮೂಢನಂತೆ ನಿಂತುಕೊಂಡಿದ್ದ. ಆಗ ಅವನ ಹೆಗಲಿನಮೇಲೆ ಯಾರೋ ಕೈ ಇಟ್ಟಂತೆ ತೋರಿತು. ಗಕ್ಕನೆ ಹಿಂದಿರುಗಿ ನೋಡಿದ ಸಾಕ್ಷಾತ್ ಮುಳ್ಳೂರಿನ ಕ್ರೈಂ ಬ್ರಾಂಚ್ ಇನ್‌ಸ್ಪೆಕ್ಟರ್ ದೊಂಗಣ್ಣ ಬಾಬುಗಳು ಕೇಡಿಗನಂತೆ ನಗುತ್ತಾ ನಿಂತಿದ್ದಾರೆ.

"ನಮಸ್ಕಾರ ಇನ್‌ಸ್ಪೆಕ್ಟರಿಗೆ" ಎಂದ ಮುದ್ದೂರಾಯು.

ಇನ್‌ಸ್ಪೆಕ್ಟರು ನಮಸ್ಕಾರ ಸ್ವೀಕರಿಸಿದರ ಹೊರತು ಪ್ರತಿ ವಂದನೆ ಸಲ್ಲಿಸಲಿಲ್ಲ ಪೋಲೀಸ್ ಜಬರದಸ್ತಿಗೆ ಪ್ರತಿವಂದನೆ ಸಲ್ಲಿಸುವುದು ಅಗೌರವವಲ್ಲವೇ ? ಒಂದು ಸಣ್ಣ ನಗೆ ನಕ್ಕರು ಅಷ್ಟೆ.

"ಏನ್ರಿ ಮುದ್ದೂರಾವ್ ಇಂಗೆ ಮಂಕರಂಗೆ ನಿಂತ್ಕೊಂಡವ್ರಲಾ. ಏನ್ಕಥೆ ?"

ಮುದ್ದೂರಾಯು ಎಲ್ಲಿದ್ದರೇನು, ಅವನು ಮುಖದಿಂದ ಮಂಕು ಕಳೆ ಕಳೆದು ಕೊಳ್ಳುವುದಕ್ಕೆ ಸಾಧ್ಯವೇ ? ಬ್ರಹ್ಮ ಮಂಕುತನದ ಠಸ್ಸೆಯನ್ನು ಮುದ್ದೂರಾಯನ ಮುಖದಮೇಲೆ ಹೊಡೆದಿರುವುದರಿಂದ ಅವನು ಎಲ್ಲಿ ನಿಂತರೂ ಮುಖದಲ್ಲಿನ ಮಂಕುತನ ಹೋಗುವಂತಿರಲಿಲ್ಲ. ಆದರೂ ಆ ಪ್ರಶ್ನೆಗೆ ಮುದ್ದೂರಾಯ ಉತ್ತರವನ್ನು ಹೇಳಿದ.

"ಎದುರಿಗೆ ನೋಡಿದ್ರಲ್ಲಾ ಆ ಮುದುಕನ್ನ. ಅವನಿಗೆ ಎಂಥಾ ಹುಚ್ಚು ಸಾರ್ . ಆ ಇಬ್ಬರು ಹುಡುಗರನ್ನ ನಾಯಿಗಳ ಹಾಗೆ ಆಟ ಆಡಿಸ್ತಿದ್ದಾನಲ್ಲಾ ನೋಡಿ...."

" ಇದರಲ್ಲೇನ್ರಿ ಆಶ್ಚರ್ಯ. ಅವ್ನು ಒಂದು ನಾಯಿ ಕಣ್ರಿ" ಎಂದರು ಬಾಬುಗಳು.

" ಛೆ....ಛೆ....ಈ ಮಾತು ತಾವು ಆಡ್ಬಾರ್ದು ಬಾಬುಗಳೇ. ಇರಬಹುದು ಪೋಲೀಸಿನೋರು ಕ್ರೈಂಬ್ರಾಂಚ್ ನೋರು ಅನ್ನೊ ಜಭರದಸ್ತಿ. ಆದ್ರೆ ಹಿರೀರನ್ನ ಮುದುಕರನ್ನ ಹೀಗೆಲ್ಲಾ ನಾಯಿ ಬೆಕ್ಕು ಅನ್ಬಾರ್ದು. ನೀವು ಡಿ. ಐ. ಜಿ ಗಳೇ ಆಗಿದ್ರೂ ಇಂತಾ ದುರಹಂಕಾರ ಇರಬಾರ್ದು...."

" ಮುಗೀತೇನ್ರಿ ನಿಮ್ಮ ಬಾಷಣ. ಏನ್ರೀ ನಾನು ಅಂತಾ ಮಾತ್ನಾಡಿದ್ದು ? "

" ಮತ್ತೆ ಮುದುಕರ್ನ ನಾಯಿ ನರಿ ಅನ್ನೋದು ಬಲೇ ಮರ್ಯಾದೆ ಮಾತು ಅಲ್ವೇ ?" ಎಂದು ಮುದ್ದೂರಾಯ ಝಾಡಿಸಿದ.

" ಆವರನ್ನ ನಾನು ನರಿ ಅಂದನೇನ್ರಿ...."

" ಇಲ್ಲ, ನಾಯಿ ಅಂತಂದ್ರಿ...."

" ಅದ್ರಾಗೆ ತಪ್ಪೇನೈತೆ ? "

" ಅಲ್ಲಾ ಸಾರ್ ಮನುಷ್ಯನ್ನ ನಾಯಿ ಅಂತ ಕರೆದು ತಪ್ಪೇನೈತೆ ಅಂತೀ ರಲ್ಲಾ. ನಿಮ್ಮ ಈ ವಾದಕ್ಕೆ ನಾನೇನು ಹೇಳಲಿ ?" ಎಂದು ಅಸಹಾಯಕನಂತೆ ನುಡಿದ ಮುದ್ದೂರಾವ್.

" ಮನುಷ್ಯ ನಾಯಿ ಕೆಲ್ಸ ಮಾಡಿದ್ರೆ ಆವನ್ನ ನಾಯಿ ಅಂತೀರೋ ಮನ್ಸ ಅಂತೀರೋ ? "

" ನಾಯಿ ಅಂತ "

" ಸರಿ ಮಂತೆ " ಎಂದರು ದೊಂಗಣ್ಣ ಬಾಬುಗಳು ಗೆದ್ದ ಹುಂಜದ ನಗೆ ಯನ್ನು ಬೀರುತ್ತಾ.

" ಅದಲ್ಲಾ ಬಾಬುಗಳೇ ಅವನು ನಾಯಿ ಕೆಲಸ ಮಾಡಿದ ಅಂದ್ರಲ್ಲಾ ಅದ್ಯಾವ ಕೆಲ್ಸ ಮಾಡಿದ ಹೇಳಿ. ಖೂನಿ ಮಾಡಿದಾನ್ಯೆ, ವ್ಯಭಿಚಾರಿಯೇ, ಇಲ್ಲಾ ಚೋರನೆ ?...."

" ಅಂಥಾದೆಲ್ಲಾ ನಾಯಿ ಮಾಡ್ತದೇನ್ರಿ....? "

" ಇಲ್ಲ. "

" ಮಂತೆ ಇವ್ನು ಅಂತಾದ್ನ ಯಾವ್ದು ಮಾಡಿಲ್ಲ. "

" ಮಂತೆ ಈ ಮುದುಕರ್ನ ನಾಯಿಗ್ಯಾಕೆ ಹೋಲಿಸಿದ್ರಿ....? "

" ಅವ ನಾಯಿ ಚಾಕ್ರಿ ಮಾಡ್ತಿದ್ದ ಅಂದ್ನಲ್ಲಾ ?"

" ನಾಯಿ ಚಾಕ್ರಿ ಅಂದ್ರೆ ಇವ ಬಾಲ ಗುಂಗಾಡಿಸ್ತಾ ಓಡಾಡ್ತಿದ್ದನೆ....?"

ನಮ್ಮ ಪೋಲಿಶ್ನಾಗೆ ನಾಯಿ ಯಾತಕ್ಕೆ ಉಪಯೋಗಕ್ಕೆ ಬರ್ತೈತೆ ಯೋಳಿ ?" ಮೇದಾವಿ ಮೇಷ್ಟ್ರುಹಾಗೆ ಪ್ರಶ್ನಿಸಿದರು ಬಾಬುಗಳು,

" ಕಳ್ರನ್ನ ಹಿಡಿಯೋಕೆ ಅಲ್ವೆ ? "

" ಔದು. ಅದ್ಕೆ ಈ ಮುದುಕನ್ನೂ ಇಟ್ಕೊಂಡಿದ್ರು...."

" ಅಂದ್ರೆ ಈ ಮುದುಕರು ಯಾಮಿಕ ಖಾತೆಯಲ್ಲಿದ್ರೆ ?"

" ಪೋಲೀಸ್ನಾಗೆ ಇದ್ದು ರಿಟೈರಾಗವ್ರೆ. ಈಗ ಈ ಹುಡುಗರ್ಗೆ ಕಸಬಿನ ಟ್ರೈನಿಂಗ್ ಕೊಡ್ತಾವ್ರೆ."

" ಯಾಮಿಕ ಖಾತೇಲಿ ಇವರೇನು ಧಫೇದಾರರಾಗಿದ್ರೊ, ಇಲ್ಲ ಇನ್ಸ್ಪೆಕ್ಟರಾಗಿದ್ರೋ" ಅದೆಲ್ಲಾ ಇಲ್ರಿ. ನಾಯಿ ಆಗಿದ್ರು. ಅದಕ್ಕೆ ಆ ಮುದುಕನ ಎಸ್ರು ಡಾಗ್ ಶೇಷಪ್ಪ ಅಂತ್ಲೆ...."

" ಇದೇನು ಹುಡುಗಾಟ ಸ್ವಾಮಿ. ಮನುಷ್ಯರನ್ನ ನಾಯಿ ಅಂತ ಇಟ್ಕೋಳ್ಳೋಕೆ ನಿಮ್ಮ ಪೋಲೀಸಿನೋರಿಗೆ ಕಣ್ಣಿಲ್ವೆ, ಬುದ್ಧಿಯಿಲ್ವೆ ? "

" ಎಲ್ಲಾ ಐತೆ ಮದ್ದೂರಾವ್. ಆದ್ರೆ ಪರಿಸ್ಥಿತಿ ಅಂಗೆ ಬಂದ್ಬುಡ್ತು ಆದೊಂದು ದೊಡ್ಡ ಕಥೆ ಬರ್ರಿ ಆ ಬೆಂಚಿನಮ್ಯಾಕೆ ಕುಂತ್ಕೊಳ್ಳೋಣ." ಎಂದು ಬಾಬುಗಳು ಮುನ್ನಡೆದರು. ಮದ್ದೂರಾಯ ಹಿಂಬಾಲಿಸಿದ.

ಇಬ್ಬರೂ ಶಿಲಾಸನದಮೇಲೆ ಮಂಡಿಸಿದ ನಂತರ ಬಾಬುಗಳು ಚಾಮಿ ಬೀಡಿಯೊಂದನ್ನು ಹೊತ್ತಿಸಿಕೊಂಡರು. ಮದ್ದೂರಾಯನೂ ಅಸ್ತಮ ಶಾಂತಿ ಬೀಡಿಗೆ ಬೆಂಕಿ ಇಟ್ಟು ಹೊಗೆ ಕಾರುತ್ತಾ ಕುಳಿತುಕೊಂಡ.

" ತ್ಯಾಮಸಂದ್ರದ ಮಾತು ಏಳ್ತೀನಿ. ಆಗ ಪರಂಗಿಯೋರು ಇದ್ದ ಕಾಲ. ತ್ಯಾಮಸಂದ್ರದಾಗು ಒಂದು ಪೋಲೀಸ್ ಟೇಸನ್ ಇತ್ತು. ಅಲ್ಲಿ ಎಡ್ ಕಾನ್ಸ್ಟೇಬಿಲ್ಲೇನೆ ಇನ್ಸ್ಪೆಕ್ಟರ್ ಚಾಕ್ರೀನೂ ಮಾಡ್ತಿದ್ದ. ಸಮಯ ಬಿದ್ರೆ ಕನಿಷ್ಟ ಬಿಲ್ಲೆ ಚಾಕ್ರೀನೂ ಮಾಡ್ತಿದ್ದ "

" ಸ್ವಯಂ ರಾಜಾ ಸ್ವಯಂ ಪ್ರಜಾ ಅನ್ನಿ " ಎಂತ ಹೇಳಿ ಹೆ ಹೆ ಅಂತ ನಕ್ಕ ಮದ್ದೂರಾಯ

" ಅಂಗೇ ಮಡೀಕೋಳ್ಳಿ. ಎಡ್ ಕನಿಷ್ಟಬಿಲ್ಲೆ ಕೊಟ್ಟೂರಪ್ಪನ ಕೈಕೆಳಗೆ ನಾಕು ಮಂದಿ ಕನಿಷ್ಟಬಿಲ್ಲೇಗೋಳು ಇದ್ರು, ಅಷ್ಟೇಯೇ. ತ್ಯಾಮಸಂದ್ರದ ಜನಗೋಳ ಮ್ಯಾಕೆ ಜಭರ್ದಸ್ತಿ ಮಾಡ್ತಾ ಕೊಟ್ಟೂರಪ್ಪ ಹಾಯಾಗಿದ್ದ.

ಒರಗಡೆ ಆಯಾಗಿದ್ದ. ಆದ್ರೆ ಮನೆಯಾಗೆ ಅವನ್ಗೆ ಸುಖ ಇರ್ನಿಲ್ಲ...."

" ಯಾಕೊ ?" ಮದ್ದೂರಾಯ ಬೀಡಿ ಊದುತ್ತಾ ಪ್ರಶ್ನಿಸಿದ.

" ಯಾಕೆ ಅಂದ್ರೆ ಭಾಮೈದ ಮನೆನಾಗೆ ಕೆಲ್ಸ ಇಲ್ದೆ ಕುಂತಿದ್ದ  ' ಸಾರಿ ದುನಿಯಾ ಏಕ್ ತರಫ್, ಜೋರೂಕ ಭಾಯಿ ಏಕ್ ತರಫ್ ' ಅನ್ನೋಕಿಲ್ವ ಅಂಗೆ ಈ ಜೋರೂಕಾ ಭಾಯ್ ಸೇಸಪ್ಪ ಚಾಕ್ರಿ ಗೀಕ್ರಿ ಇಲ್ದೆ ಆರಾಮ್ ಮನೇನಾಗೆ ಕುಂತ್ಬುಟ್ಟಿದ್ದ. ಇವನ್ಗೆ ಒಂದು ನೌಕ್ರಿ ಒಂದಿಸ್ ಕೊಡ್ಬೇಕೂಂತ ಕೊಟ್ಟೂರಪ್ಪ ಒದ್ದಾಡ್ತಿದ್ದ ರಾತ್ರಿ ಆಗಲೂ ಅವನ್ಗೆ ಅದೇ ವೇಚ್ನೆ ಆಗಿತ್ತು. "

" ಸರಿ ಆಮೇಲೆ ?"

" ಆ ಮೇಕೆ ಕೊಟ್ಟೂರಪ್ಪ ತಲೆ ಕೆಡಿಸಿಕೊಂಡು ಕೂತಿರುವಾಗ ಅವನ ಎಂಡ್ತಿ ' ಎಂಗಿದ್ರೂ ನಿಮ್ಮ ಡಿಪಾರ್ಟ್‌ಮೆಂಟಿನಾಗೆ ಕಳ್ರನ್ನ ಇಡಿಯೋಕೆ ನಾಯಿ ಇಟ್ಕೊಂತಾರೆ. ಆದು ಮಾಡೋ ಚಾಕ್ರೀನ ಸೇಸಪ್ಪ ಮಾಡ್ತಾನೆ. ನೀವು ಅವನ್ಗೆ ಆ ಚಾಕ್ರಿ ಮಾಡಿಸ್ಕೊಡಿ ' ಅಂತ ಎಂಡ್ತಿ ಮಾತು ಕೇಳ್ಕೊಂಡಿ ತಾಲ್ಲೂಕ್ ಎಡ್ ಕ್ವಾಟರ್ಸ್‌ಗೆ ಒಂದು ಅರ್ಜಿ ಗುಜರಾಯಿಸಿದ.

" ಏನಂತ ?" ಮದ್ದೂರಾಯ ಮೂಗು ಹಾಯಿಸಿದ.

" ತ್ಯಾಮಸಂದ್ರದಾಗೆ ಕೊಲೆ, ಕಳ್ತನ, ಚೋರಿ, ದಗಲ್‌ಬಾಜಿ ಎಲ್ಲಾ ಜಾಸ್ತಿ ಆಗೈತೆ. ಒಂದು ಅಲ್‌ಸೇಷಿ ನಾಯನ್ನ ಇಟ್ಕೊಂಡ್ರೆ ಅನುಕೂಲ ಆಗ್ತೈತೆ. ಆದ್ರಿಂದ ನಾಯನ್ನು ಸ್ಯಾಂಕ್ಷನ್ ಮಾಡ್ಬೇಕು. " ಅಂತ ಬರ್ಕೊಂಡಿದ್ದನಂತೆ. ಆಗ ಎಡ್ ಕ್ವಾಟರ್ಸ್‌ನಾಗೆ ಬೂಟ್ ಅನ್ನೋ ಪರಂಗಿಯೋನು ಡಿ. ಎಸ್. ಪಿ. ಆಗಿದ್ದ ನಂತೆ ಅವನ್ಗೆ ಮನುಷ್ಯರಿಗಿಂತ ನಾಯಿ, ನರಿ, ಕೋಳಿ. ಪಾಳಿಗೋಳ್ನ ಕಂಡ್ರೆ ಪಿರೀತನಂತೆ. ಕೊಟ್ಟೂರಪ್ಪ ನಾಯಿ ಇಸ್ಯ ಬರೆದಿರೋದ ನೋಡಿ ಕೂಡ್ಲೆ ಸ್ಯಾಂಕ್ಸನ್ನು ಮಾಡ್ಬಿಟ್ಟನಂತೆ. ನಾಯಿಗೆ ತಿಂಗಳ್ಗೆ ಐವತ್ತು ರೂಪಾಯಿ ಸ್ಯಾಂಕ್ಸನ್ ಮಾಡಿದ್ನಂತೆ. ಆದರ ಟ್ರೈನಿ ಕೊಟ್ಟೂರಪ್ಪನ್ಗೆ ಇಪ್ಪತ್ತೈದು ರೂಪಾಯಿ ಬಡ್ತಿ ಕೊಟ್ಟನಂತೆ.

" ಕೊಟ್ಟೂರಪ್ಪ ಸೇಸಪ್ಪನವರನ್ನೇ ಹೇಗೆ ಅಪಾಯಿಂಟ್ ಮಾಡ್ಕೊಂಡ್ರು ?"

" ಏಳಿದ್ನಲ್ರಿ. ಅಪಾಯಿಂಟ್ ಮೆಂಟ್ ಆರ್ಡರಿನಾಗೆ ಡಾಗ್ ಸೇಸಪ್ಪ ಅಂತ ಬರ್ದು ಸೇಸಪ್ಪನ್ತಾವು ರುಜು ಆಕಿಸಿಕೊಂಡಿದ್ದ ಕೊಟ್ಟೂರಪ್ಪ. ಸೇಸಪ್ಪ ಮಾಂಸ ಮಡ್ಡಿಗೇ ಅಂತ ಸ್ಯಾಂಕ್ಸನ್ ಮಾಡಿದ್ದ ಐವತ್ತು ರೂಪಾಯಿನಾಗೆ ಗುಜಿರಾನ ನಡಿಸ್ತಿದ್ದ. ಮನುಸ್ಸನ್ಗೆ ಆಸೆ ಅನ್ನೋದು ಬಲು ಕೆಟ್ಟದು ನೋಡ್ರಿ...."

ಇದ್ದಕ್ಕಿದ್ದಂತೆ ಬಾಬುಗಳು ಮಾಡುತ್ತಿದ್ದ ಆಸೆಯ ಮೇಲಿನ ವ್ಯಾಖ್ಯಾನವನ್ನು ಮುಂದುವರಿಸಲು ಬಿಟ್ಟರೆ ನಂತರ ಮುಖ್ಯ ಕಥೆಯೇ ಮುಂದೋಡುವುದಿಲ್ಲವೆಂದು ಅಂಜಿ ಮದ್ದೂರಾಯ ತಕ್ಷಣವೇ ಅಡ್ಡ ಮಾತು ತೆಗೆದ.

“ ಅದ್ಸರಿ ಸೇಸಪ್ಪ ಏನ್ಮಾಡ್ದ ?” ಎಂದು ನೇರವಾದ ಸವಾಲು ಹಾಕಿದ. “ ಆವನ್ಗೂ ಮದ್ವೆ ಆಯ್ತು. ಹೆಂಡ್ತಿ ಬಂದು ಕಿವಿ ಕಚ್ಚಿದ್ಳು. ಇಂಗೆಲ್ಲ ಕುಂತ್ರೆ ಆಗೋಕಿಲ್ಲ. ಸಂಬಳ ಜಾಸ್ತಿ ಆಗೋ ಅಂಗೆ ಭಾವನೋರತಾಕೆ ಯೇಳಿ. ಮಕ್ಳು ಮರಿ ಆದ್ರೆ ಸುಮ್ಕಾಯ್ತದ ಅಂದ್ಳು. ಸರಿ ಮಂತ್ರಿ ಕೊಟ್ರೂರಪ್ಪನ ಕತ್ಗೆ ಬಂತು. ಆವ ಮಾಂಶದ ಬೆಲೆ ಜಾಸ್ತಿ ಆಗ್ಯೆತೆ ಅದ್ರಿಂದ ಅಣ ಜಾಸ್ತಿ ಸ್ಯಾಂಕ್ಸನ್ ಆಗ್ಬೇಕೂ ಅಂತ ರಿಕ್ವೆಸ್ಟ್ ಮಾಡಿಕೊಂಡ, ಬೂಟ್ ದೊರೆ ಬಾಯ್ಮುಚ್ಚಿಕೊಂಡು ಸ್ಯಾಂಕ್ಸನ್ ಮಾಡೋವ್ನು ತಿಂಗಳು ತಿಂಗಳ್ಗೂ ಕೊಟ್ರೂರಪ್ಪನ ಕಾಜಗಗೋಳು ಎಚ್ಚಾದ್ವು. ನಾಯಿಗೆ ರೋಗ ಬಂದ್ಯೆತೆ. ಇಂಜಕ್ಸನ್ ಕೊಡಿಸ್ಬೇಕು, ತತ್ರಿ ಕೊಡಬೇಕು, ಆಲು ಉಯ್ಯಬೇಕು, ಡಾಕ್ಟರ್ ಫೀಜು ಕೊಡ್ಬೇಕು, ನಾಯಿಗೆ ಬೆಲ್ಟು, ಸರಪಳಿ ತರ್ಬೇಕು ನಾಯಿಗೆ ಸೋಪು, ಬ್ರಸ್ಸು ಬೇಕು. ಇಂಗೆ ನೂರೆಂಟು ಬರ್ದು ದುಡ್ಡು ಒಡ್ದು ಸೇಸಪ್ಪನ್ಗೆ ಕೊಡ್ತಿದ್ದ.”

“ ಬೂಟ್ ದೊರೆಗೂ ಬಲೇ ಆಶ್ಚರ್ಯ ಆಗೋಗ್ಬುಡ್ತು. ಆವನು ತ್ಯಾಮಸಂದ್ರದ ನಾಯಿಗೆ ಖರ್ಚು ಮಾಡಿದ ಲೆಕ್ಕ ನೋಡಿದ ಮೇಕೆ ಖರ್ಚಾದ್ದು ಆಯ್ತು ಆದ್ರೆ ಆ ನಾಯಿ ಇಡಿದಿದ್ದು ಒಂದು ಕೇಸಾದ್ರು ಬ್ಯಾಡ್ವಾ ಪೋಲೀಸ್ ಖಾತೆ ಇಂಗೆ ಖರ್ಚು ಮಾಡಿ ನಾಯಿ ಬೆಳಸಿ ಪಯೋಜನ ಏನ್ಯೆತೆ ಸುಮ್ಕೆ ಕೊಟ್ರೂರಪ್ಪನ ಖುಸೀಗೆ ನಾಯಿ ಸಾಕ್ತಾವ್ನ ? ಒಂದೂ ತಿಳೀದೇ ಓಯ್ತು “ ಎಲ್ಲಾ ವಿಚಾರಿಸ್ಕೊಂಡು ಎನ್ಕ್ವೈರೀ ಮಾಡ್ಕೊಂಡು ಬಾ ” ಅಂತ ನನ್ನ ಅಟ್ಟಿದ್ರು ದೊರೆಗಳು ತ್ಯಾಮಸಂದ್ರಕ್ಕೆ ನಾನು ತನಿಖೆಗೆ ಬರೋ ಇಸ್ಯ ಅದೆಂಗೋ ತಿಳಿದೋಗ್ಯೆತೆ ಕೊಟ್ರೂರಪ್ಪನ್ಗೆ ಅವನೇ ಬಸ್ಸಿನ ತಾಕೆ ಬಂದು ದೊಡ್ಡ ಊಮಾಲೆ ಹಾಕಿ ನನ್ನ ಬಸ್ಸಿನಾಗಿಂದ ಇಳಿಸಿಕೊಂಡ ನಾಕು ಮಂದಿ ಕನಿಷ್ಟಬಿಲ್ಗೋಳ ಗಾರ್ಡ್ ಆಫ್ ಆನರ್ ಆದ್ಮೇಕೆ ಅವನ ಮನೆಗೆ ಕರ್ಕೊಂಡು ಓದ–ಬಿಸಿ ಕಾಫಿ, ಜಳಕ ಮಾಡಿದ್ಮೇಕೆ ಇನ್ನೊಂದಪ ಕಾಫಿ ಉಪ್ಪಿಟ್ಟು ಊಟಕ್ಕೆ ಭರ್ಜರಿ ಮ್ಯೃಷ್ಟಾನ್ನ ಮಾಡಿದ್ದ....”

“ ಭೇಷ್ ಭೇಷ್ ನಿಮ್ಗೂ ನೀವು ಯಾತಕ್ಕೆ ಬಂದ್ರಿ ತ್ಯಾಮಸಂದ್ರಕ್ಕೆ ಅಂಬೋದು ಮರ್ತು ಹೋಗಿರ್ಬೇಕು ಈ ಔತಣದ ಸಮಾರಂಭದಲ್ಲಿ” ಮದ್ದೂರಾಯ ತನ್ನ ಮಾಮೂಲಿ ಹಳದಿಯ ನಗೆ ನಕ್ಕ.

“ದಿಟವಾಗಿ ಏಳದ್ರಿ ಮದ್ದೂರಾಯ. ಮುಂಜಾನೆಯಿಂದ ಸಂಜೆವರ್ಗೂ ಔತನಾವೆ ಆಗಿ ನನ್ನ ತೂಕ ಐವತ್ತು ಪೌಂಡು ಎಚ್ಚಾಗೋಯ್ತು. ಬೂಟ್‌ದೊರೆ ಕಾಜಗ ಬರೆಯೋ ಗಂಟ ನಂಗೆ ನಾ ಯಾಕೆ ಇಲ್ಲಿಗೆ ಬಂದಿವ್ನಿ ಅನ್ನೋ ನೆಪ್ಪೆ ಆಗ್ನಿಲ್ಲ. ದೊರೆ ಕಾಜಗ ಬಂದಾಗ್ಲೆ ಪೋಲೀಸಟೇಸನ್‌ಗೆ ಓದೆ. ಕೊಟ್ರೂರಪ್ಪನ್ನ ಕೇಳ್ದೆ. ಕೊಟ್ರೂರಪ್ಪ ನನ್ನ ತನಿಖೆ ಎಲ್ಲಾ ಮುಗಿದ್ಯೆತೆ. ನಾನು ಊರಿಗೆ

ಒಂಟೋಗ್ಬೇಕು. ನಿನ್ನ ನಾಯೆಂಲ್ಲೈತೆ ನೋಡ್ಬೇಕು ಪಸಿಕರಿ ಅಂದೆ. ಕೊಟ್ರೂರಪ್ಪ 'ಸೇಸಪ್ಪಾ ಸೇಸಪ್ಪಾ' ಅಂತ ಬಡ್ಕೊಂಡ. ಸೇಸಪ್ಪ ಬಂದು ಅಲ್ಲಿ ಕಿರೀತಾ ನಿಂತ್ಕೊಂಡ."

"ನಿಮಗೆ ಆ ವೇಳೆಗೆ ಸೇಸಪ್ಪನೇ ನಾಯಿ ಅಂತ ತಿಳಿದಿತ್ತಾ?" ಮದ್ದೂರಾಯ ಪಾಠೀ ಸವಾಲು ಮಾಡಿದ,

"ಇಲ್ರಿ ಅದ್ಕೆ ಸೇಸಪ್ಪನ್ಗೆ ಹೇಳ್ದೆ ಓಗಿ ನಾಯ್ನ ಇಡ್ಕೊಂಡು ಬಾ ಅಂತ. ಸೇಸಪ್ಪ 'ನಾನೇ ನಾಯಿ ಸಾರ್' ಅಂದ ನಂಗೇ ಬಲೇ ರೇಗೋಯ್ತು, ಬಲೇ ಗರಂ ಆಗೋಗ್ಬುಟ್ಟೆ. ಆಗ ಕೊಟ್ರೂರಪ್ನೆ ಎಲ್ಲಾ ಏಳ್ಕೊಂಡಿ ಅತ್ತ. ಈ ಕಷ್ಟದಾಗೆ ನೀವೇ ಪಾರುಮಾಡ್ಬೇಕು. ಸೇಸಪ್ಪನ ಎಂಡ್ತಿ ಬಿಮ್ಮನಸೆ ಆಗವ್ಳೆ ಸೇಸಪ್ಪನ್ಗೆ ಈ ಚಾಕ್ರಿ ಓದ್ರೆ ಬ್ಯಾರೆಕಡೆ ನೌಕರಿ ಸಿಕ್ಕೋಕಿಲ್ಲ ಅಂತ ಕಾಲಿಗೆ ಬಿದ್ದ ಕೊಟ್ರೂರಪ್ಪ.

"ಸರಿ ಅಂಗಾದ್ರೆ ನಮಗೇನೈತೆ. 'ಸೇಸಪ್ಪ ನಾಯಿ ಚಾಕ್ರಿ ಮಾಡೋದ್ರಿಂದ ಅವ ನನ್ನ ಲೆಕ್ಕದಾಗೆ ನಾಯಿನೇ. ಆದ್ರೆ ಅವ ನಾಯಿ ಚಾಕ್ರಿ ಸರಿಯಾಗಿ ಮಾಡೋ ತಾಕತ್ತೈತೆ ಅಂತ ನೀವು ನನಗೆ ತೋರಿಸ್ಬೇಕು ಅಂತ ಒಂದು ಕಂಡೀಸನ್ ಆಕ್ದೆ ನಾನು."

"ಅಂದ್ರೆ ನೀವು ಅವ್ನ ನಾಯಿ ಡ್ಯೂಟಿ ಸರಿಯಾಗಿ ಮಾಡ್ತಾನೋ ಇಲ್ವೋ ಅಂತ ಪರೀಕ್ಷೆ ಮಾಡಿದ್ರೇನು ?

"ಔದು ಪೋಲೀಸ್ ನಾಯಿಗೋಳು ವಾಸನೆ ಮ್ಯಾಕೆತಾನೆ ಕಳ್ರನ್ನ ಇಡಿಯೋದು. ಅಂಗೇ ಇವನೂ ವಾಸನೆ ಮ್ಯಾಕೆ ಏನಾದ್ರೂ ಇಡೀಲಿ ನನ್ಮಾಂದೆ ಅಂತ ಯೋಳ್ದೆ. ಸೇಸಪ್ಪ ಮೊದ್ಲಿಂದ್ಲೂ ವಾಸನೆ ಇಡಿಯೋದ್ರಲ್ಲಿ ಖಧೀಮನಂತೆ. ಪಕೋಡ ಕರಿಯೋ ವಾಸನೆ ಇಡ್ದು ಅವ ಒಂದು ಮೈಲಿ ದೂರದಾಗೆ ಇರೋ ಅಂಗಡಿ ಕಂಡು ಇಡೀತಿದ್ನಂತೆ." "ಅಂದ್ರೆ ನೀವು ಏನು ಟೆಸ್ಟ್ ಕೊಟ್ರಿ?" ಮದ್ದೂರಾಯ ಕುತೂಹಲದಿಂದ ಪ್ರಶ್ನಿಸಿದ.

"ನಾನು ಕೊಡ್ಲಿಲ್ಲ ಕೊಟ್ರೂರಪ್ನೆ ಕೊಟ್ಟ. ಒಂದು ರೂಪಾಯ ನೋಟು ತೆಗ್ದು ಸೇಸಪ್ಪನ ಮುಗಿನ ತಾವು ಇಡ್ದು ಅವನು ಅದರ ವಾಸ್ನೆ ಇಡಿದ ಮ್ಯಾಕೆ. ಸೇಸಪ್ಪನ ಒರಗೆ ಅಟ್ಟಿ ಅವ ಒರಗೆ ಓದಮೇಕೆ ಆ ನೋಟ್ನ ನನ್ನ ಜೇಬಿನಾಗೆ ಆಕಿ ಸೇಸಪ್ಪನ್ನ ಕರ್ದ. ಅವನು ಮೂಗು ಒಳ್ಳೆ ಗೋಳ್ನ ಅರಳಿಸ್ತಲೇ ಬಂದು ಅಲ್ಲಿ ಇಲ್ಲಿ ಉಡುಕಿ ಕೊನೆಗೆ ನನ್ತಾವು ಬಂದು ನಿಂತ್ಕೊಂಡ. 'ನಿಮ್ತಾವೇ ಐತೆ ನೋಟು ತೆಗೀರಿ' ಅಂದ. ನಂಗೂ ಆಶ್ಚರ್ಯ ಆಗೋಯ್ತು. ಕೊಟ್ರೂರಪ್ಪ ಕೇಳ್ದ 'ಒಪ್ಪಿದ್ರಾ ಬಾಬುಗಳೇ' ಅಂತ. ಒಪ್ದೆ ಅಂದೆ ನಾನು. ನಾಯಿಗಿಂತ ಈ

ನರ ಮನುಸ್ಸನೇ ವಾಸಿ. ಇವ ವಾಸನೇನೂ ಇಡೀತಾನೆ. ಮಾತೂ ಆಡ್ತಾನೆ. ನಾಯಾದ್ರೆ ವಾಸನೇ ಮಾತ್ರ ಇಡೀತೈತೆ ಅಷ್ಟೆ. ಅದೂ ಅಲ್ದೆ ಮನುಸ್ಸನ್ಗೆ ಒಟ್ಟೇಗಿಲ್ದೆ ಇರೋವಾಗ ನಾಯಿನ ಜೀವ್ನ ನಡಸ್ತಾ ಕೂತ್ಕೊಳ್ಳೋದ ಅಂತ ಅನ್ಕಂಡಿ ನಾನು ಬೂಟ್ ದೊರೆಗೆ ಕಾಜಗ ಬರ್ದುಬುಟ್ಟೆ.

“ಏನಂತ ಬರದ್ರಿ.....ಪೋರ್ಟ್ರು ?” ಎಂದು ಕೇಳಿದ ಮದ್ದೂರಾಯ. “ತ್ಯಾಮ ಸಂದ್ರದ ಪೋಲೀಸ್ ಡಾಗ್ ಸೇಸಪ್ಪ ಒಳ್ಳೆ ಪ್ರಾಣಿ. ಅವರ ವಾಸನಾ ಶಕ್ತಿ ಚೆನ್ನಾಗಿದೆ. ಆದ್ರೂ ಇನ್ನೂ ದೃಡಕಾಯ ಆಗ್ಬೇಕಾಗೈತೆ. ಆದಕ್ಕೆ ಇನ್ನೂ ಎರಡು ಇನ್‌ಕ್ರಿಮೆಂಟು ಕೊಟ್ರೆ ಒಳ್ಳೇದು ಅಂತ ಬರ್ದೆ. ಸೇಸಪ್ಪ, ಕೊಟ್ಟೂರಪ್ಪ ಇಬ್ರೂ ನನ್ನ ಕಾಲು ಇಡ್ಕೊಂಡುಬುಟ್ರು. ಸೇಸಪ್ಪ ಈಗೀಗ ರಿಟೈರಾಗವ್ನೆ. ನನ್ನ ನೋಡ್ನಿಲ್ಲ ಅವನು. ಇಲ್ದಿದ್ರೆ ನನ್ನ ಬುಡ್ತಾನೇ ಇರಲಿಲ್ಲ” ಎಂದರು ಬಾಬುಗಳು.

ಮದ್ದೂರಾಯ ಪೋಲೀಸ್ ಡಾಗ್ ಶೇಷಪ್ಪನವರು ದೂರದಲ್ಲಿ ಮಕ್ಕಳೊಂದಿಗೆ ಆಡುತ್ತಿದ್ದುದನ್ನು ಮತ್ತೊಮ್ಮೆ ಹೊರಳಿ ನೋಡಿದ,

ಕೆ. ಎನ್. ಕಿಟ್ಟನ್



ಇದೇನೋ ಇಷ್ಟು ಬಿರುಸಾಗಿ ಕಸ ಹೊಡೀತಿದೀ ?
ಇಲೆಕ್ಷನ್ ಅಲ್ಲವಾ ! ಸಾಹೇಬ್ರು,

# ವೋಟಿನ ದಾಸಯ್ಯ

(ಶಾಂತಕವಿಗಳ ಆತ್ಮಕ್ಕೆ ಶಾಂತಿ ಕೋರಿ)

ಬೇಡಲು ವೋಟಿನ ದಾಸಯ್ಯ ಬಂದಿಹ
ಹೂಂ ಅನ್ನಿರಪ್ಪೊ ತಡಮಾಡದಲೆ
ಪಲ್ಲವಿಯೊಂದನು ಹೊಸದಾಗಿ ಹೆಣೆದಿಹ
ಕೂಡಿರಿ ಕೇಳಿರಿ ಹಾಡುವನು

'ಎನ್ನಯ ಪಾರ್ಟಿಯು ಭಾರಿ ಯತ್ನಗಳಿಂದ
ಬಿಸಿಲನು ಮಳೆಯನು ಪಡೆದಿಹಿರಿ
ಎನ್ನವರಿಂದಲೆ ಉಟ್ಟುಂಡು ಸುಖವಾಗಿ
ಬೆಚ್ಚನೆ ಮನೆಯಲ್ಲಿ ಮಲಗಿಹಿರಿ
ಎಮ್ಮಿಂದ ದೇಶವು ಜನಭರಿತವಾಯಿತು
ಸಂಖ್ಯೆಯು ಕೀರ್ತಿಯು ತಾಗಳಿಸಿತು
ಎಮ್ಮಿಂದಲೆ ಹಲರು ಶ್ರೀಮಂತರಾದರು
ಮೊಗಲರ ಮೀರಿಸಿ ಮೆರೆದಿಹರು
ಆ ಶ್ರೀಮಂತಿಕೆಯು ನಿಮಗೂ ತರಬೇಕೆಂದು
ಹಾಲು ಜೇನನು ಇಲ್ಲಿ ಹರಿಸಬೇಕೆಂದು
ವೋಟು ಬೇಡಲಿಕೆ ಬಂದಿಹೆ ನಾನೀಗ
ಮನ್ನಿಸಿ ವೋಟನು ಕೊಡಿರಯ್ಯ'
ಮಾಡೋಕ್ಕೆಲಸ್ವಿಲ್ದೆ ಬಂದವನಿವನಲ್ಲ
ಕಾರುಬಿಟ್ಟು ನಡೆದವನಲ್ಲವು
ಈಗೇನೋ ದಿಟ್ಟಿಸಿ ಜನಗಳ ಮುಖಗಳ
ವೋಟು ವೋಟೆಂದು ಕೈಮುಗಿಯುತಿಹನು

ಬರಿ ಹೊಟ್ಟೆಯಾ ಮುಖ ಸೈ ಎಂದಿತು
ಕರಿ ಮೀಸೆಯಾ ಮುಖ ನಡೆಯೆಂದಿತು
ನರಿ ಮುಖದಾ ಅದ್ಮಿ ಎತ್ತಲೋ ನೋಡಿತು
ಬರಿ ಹೊಟ್ಟೆಯಾ ಮುಖ ನೆಲ ಕಂಡಿತು.

ಹೂಂ ಅಂದ್ರೆ ನಂಬುವ ಇಲ್ಲಾಂದ್ರೆ ತೊಲಗುವ
ಹುಂಬ ಆಸಾಮಿ ಯಿವನಲ್ಲವು
ಸಿಕ್ಕಷ್ಟು ವೋಟೆಲ್ಲ ಸೀಟುದಕ್ಕುವ ಛಾನ್ಸು
ಹೆಂಗಾದ್ರು ಮೆಂಬರಾಗಬೇಕೆಂದೇ ಇಹನು.

ವೋಟಿಗಲ್ಲವು ಅವನ ಸೀಟಿಗೆ ಬೆಲೆಯಿದೆ
ಸೀಟಲ್ಲವೇ ವೋಟಿನ ಮೂಲವು
ಈ ಸೂತ್ರವ ಹಳೆ ಹುಲಿಯಿಂದ ಕಲಿತ
ಸಾವಿರ ಗಟ್ಟಲೆ ಸುರಿದಿಹನು

—ರಾಮಿ



ಚೀನೀ ರೆಡ್ ಗಾರ್ಡ್‌ಗಳ ಸಂಸ್ಕೃತಿ ಸವಾರಿ

# ನಮ್ಮ ಪುಟ್ಟ

ನೋಡ್ ಬೇಕಣ್ರೀ ನಮ್ಮ್ ಪುಡ್ಗನಾಟ
ಮೂರೇ ವರ್ಸದ ಬಾಲ್ಕ !
ನೋಡ್ತಿದ್ದಂಗೇ ಪ್ರಾಣೋದ್ರೂನೇ
ಓಗ್ಲೀ ಕತ್ತೇ ಬಾಲ !

ಮೂರೇ ವರ್ಸದ ಹಿಂದಾಗಲ್ವಾ
ಲಚ್ಚೀ ಇವನ್ ಹೆತ್ತದ್ದೂ....?
ಆಗ್ಲೀ ಅಲ್ವಾ ಕಿಷ್ಣನ್ ಕೊಳ್ಳಂಗ್
ಇಂಪಾಗಿವ್ನತ್ತಿದ್ದೂ....?!

ಏನ್ ದಿಮಾಕೋ ಕೇರೀಗೆಲ್ಲಾ
ಕೊಬ್ರೀ ಬೆಲ್ಲ ಅಂಚಿ
ಮೀಸೇ ಮ್ಯಾಗೇ ಕೈ ಆಡಿಸ್ದ
ಹಾಕೀ ಕಚ್ಚೀ ಪಂಚಿ....!

ಮಲ್ಗೀ ಗಿಡ್ದಂಪ್ ಬೆಳ್ಕಂಬಂದಾ
ಏನೇಳಪ್ಪಾ ಪುಟ್ಟಾ....!
ಗುಡ್ಲಾಗೆಲ್ಲಾ ಎಜ್ಜೇ ಮಾಡ್ದ
ಅಂಗಣದಾಗ್ ಕಾಲಿಟ್ಟ....!!

ಮೈಮ್ಯಾಗೆಲ್ಲಾ ಬೂದಿ ಬಳ್ಕಂಡ್
ಕಾಣ್ತಾನ್ ಮಾದೇವ್ನಂಗೆ....!
ಎಮ್ಮೇ ಕರ್ತಾವ್ ದಂಟಿಡ್ಕಂಡ್ರೆ
ಸಾಕ್ಷಾತ್ ಕಿಷ್ಣನ್ನಂಗೆ....!

ನಿದ್ದೇ ಬ್ಯಾಡ, ಮುದ್ದೇ ಬ್ಯಾಡ
ಇದ್ರೆ ಪುಟ್ಟನ್ ಕೂಟ !
ಒಂದೇ ಎಲ್ಡೇ ಎಂಗೇಳ್ಳಪ್ಪಾ ?
ಪುಟ್ಟನ್ ಆಟ್ಟೇ ಆಟ....!

ತ್ರಿಮೂ ೩೯

# ಗುರೂನಾಂ ಸಾಗರೋಗತಿಃ

## "ಪಿಲ್ಲೂರಾಯನ ಪ್ರಭಾವ"

— ೧ —

ಸಂಜೆ ಮಠದಲ್ಲಿ ಮೌನ ಕವಿದಿತ್ತು. ಗುರುಗಳು ಆಗತಾನೆ ಪೀಠವನ್ನಲಂಕರಿಸಿದ್ದರು. ಮುಂದೆ ಹಾಸಿದ ಚಾಪೆಯ ಮೇಲೆ ಶಿಷ್ಯರುಗಳಾದ ಮಡೆಯ, ಮಂಕ, ಮುಟ್ಠಾಳ, ಮಡ್ಡಿ, ಮರುಳರುಗಳು ಮಂಡಿಗೆ ಎರಡೂ ಕೈ ಸುತ್ತಿ, ಮೊಳಕಾಲ ನಡುವೆ ತಲೆ ಸೆಕ್ಕಿ ಕೂತಿದ್ದರು. ಮಂದವಾಗಿ ನಂದಾದೀಪ ಉರಿಯುತ್ತಿತ್ತು. ಒಂದು ರೀತಿಯ ಸ್ಮಶಾನ ಮೌನದಂತೆಯೇ ಇತ್ತು ಮಠದ ವಾತಾವರಣ.

ಗುರುಗಳಿಗೆ ಫಳಾರವಾಗಿರಲಿಲ್ಲ. ನವಿರಾಗಿ ಕೆಮ್ಮಿದರು. ಶಿಷ್ಯರುಗಳು ತಲೆ ಎತ್ತಲಿಲ್ಲ. ಮುಂದಿದ್ದ ತಿಲಾಕ್ಷತೆಯ ಬಟ್ಟಲಲ್ಲಿ ಕೈಹಾಕಿ ಒಂದು ಚಿಮುಟಿಗೆ ಎಳ್ಳು ಎತ್ತಿ ಬಾಯಿಗೆ ಹಾಕಿಕೊಂಡರು. ಸಮಾಧಾನವಾಗಲಿಲ್ಲ. "ತಾಯೀ ಭುವನೇಶ್ವರೀ"—ಎಂದು ವಿಭೂತಿ ಭರಣಿಯಿಂದ ಒಂದು ಚಿಮುಟಿಗೆ ಭಸ್ಮವನ್ನು ಎತ್ತಿ ಆನಾಮತ್ ಗಂಟಲಿಗೆ ಹಾಕಿಕೊಂಡು ಪಕ್ಕದಲ್ಲಿದ್ದ ಕಮಂಡಲದಿಂದ ನೀರು ಕುಡಿದರು. ಹೊಟ್ಟೆಯಲ್ಲಿನ ತಳಮಳ ಕೆಂಡಾಮಂಡಲವಾಯ್ತು.

"ಮಂಕಾ — ಮರುಳಾ — ಮಡ್ಡೀ—ಮಿಸ್ಟರ್ ಮುಟ್ಠಾಳ್! — ಮಾಸ್ಟರ್ ಮಡೆಯಾ!...." ಒಬ್ಬೊಬ್ಬರನ್ನಾಗಿ ಕೂಗಿದರು. ಒಂದೊಂದು ಹೆಸರು ಹೇಳಿದಾಗ ಆಯಾ ಬೃಹಸ್ಪತಿಗಳು ತಟಕ್ಕನೆ ತಲೆ ಎತ್ತಿ ಪ್ರೈಮರಿ ಸ್ಕೂಲು ಹುಡುಗರಂತೆ 'ಪ್ರಜೆಂಟ್ ಗುರ್'—ಎಂದು ಉತ್ತರಿಸಿ ಮತ್ತೆ ನಿದ್ರೆ ಹೋದವರಂತೆ ಮೊಣಕಾಲ ಸಂದಲ್ಲಿ ಮುಳುಗಿಹೋದರು.

ಗುರುಗಳಿಗೂ ವಿಷಯ ಸೂಕ್ಷ್ಮವಾದದ್ದೆಂದು ಅರ್ಥವಾಗಿತ್ತು. ಆಶ್ರಮದ್ ಗಾಂಭೀರ್ಯ ಅಭಿವೃದ್ಧಿಕಾರಿಣಿ ಪರಸ್ಪರ ಸಹಾಯಕ ಸಂಘದ ಡೈರೆಕ್ಟರ್ ಗಿರಿಗೆ ತಾವು ಆ ದಾಸಪ್ಪ—ಕುಕರ್ಗಗಳೊಡನೆ ಸೇರಿ ನಿಲ್ಲುವುದಾಗಿ ಒಪ್ಪಿಕೊಂಡದ್ದು ಮಠದ ವಾತಾವರಣವನ್ನು ಕಲಕಿದೆ ಎಂಬುದು ಪ್ರತ್ಯಕ್ಷ ವ್ಯಕ್ತವಾಗುತ್ತಿತ್ತು. ಮಾನ ಮಿದುವಾದಾಗ ಆ ದಾಸಪ್ಪ ಅಸ್ತು ಅನ್ನಿಸಿಕೊಂಡು ಹೋಗಿದ್ದ.

"ಶಿಷ್ಯರುಗಳಿರಾ ಇಂದಿನ ಫಳಾರದ ವೇಳೆ ಆಯಿತು ಅನ್ನೋದನ್ನೂ ಸ್ವಯಂ ಗುರುಗಳಾದ ನಾವೇ ಜ್ಞಾಪಿಸಬೇಕೆ ?...."

—ಶಿಷ್ಯರು ಕದಲಲಿಲ್ಲ.

" 'ಓಟ್ ಫಾರ್—ಗಾಂಪರ್'—ಅಂತ ಗಂಟಲತುಂಬಾ ಕೂಗಿದ ಮಂಕ ನ್ಯಾರು ?...."

"ನಾನು ಗುರುವೆ...."

"ಆಗ ನಿನ್ನ ಬುದ್ಧಿ ಎಲ್ಲಿ ಹೋಗಿತ್ತು ? ಮಂಕನೇ...."

"ಗುರುಗಳೇ ಈ ಮಡ್ಡಿ, ಮುಟ್ಠಾಳರುಗಳು ನನ್ನ ಕಣ್ಣು ತೆರೆಯಿಸಿದರು...."

"ಈಗ ಆದದ್ದಾದರೂ ಏನು ಅನಾಹುತ ಹೇಳಿರಯ್ಯಾ"

"ಯಾವ ಬಾಯಿಂದ ಹೇಳೋಣ ಗುರುವರ್ಯಾ. ಬೀದಿಯಲ್ಲಿ ತಲೆ ಎತ್ತಿ ತಿರುಗದ ಹಾಗೆ ಆಗಿಹೋಯ್ತು ನಮ್ಮ ಪಾಡು "

"ಏನು ಅಂಥಾ ಆಗಬಾರದ್ದು ಆಗಿದೆ ಬೊಗಳಿರೋ ನಿಮ್ಮ ಮಠ ಬೀಳಾ...."

—ಗುರುಗಳು ರೇಗಿದ್ದರು. ಅವರಿಗೆ ಶಿಷ್ಯರುಗಳು ಸದಾ ದಡ್ಡ ನಗುಮುಖ ದೊಡನೆ ಸುತ್ತಲೂ ಸುಳಿಯುತ್ತಿದ್ದರೆ ತಿಂದ ಫಳಾರ ಜೀರ್ಣವಾಗುತ್ತಿದ್ದುದು. ಹೀಗಿರುವಲ್ಲಿ ಮಠದಲ್ಲಿ ಶ್ರಾದ್ಧವೊ ಎಂಬ ರೀತಿ ಈ ಶಿಷ್ಯರುಗಳು ತಲೆ ತಗ್ಗಿಸಿ ಕೊಂಡು ದುಃಖದಿಂದ ಕೂತಿರುವುದನ್ನು ನೋಡಲಾದೀತೆ ?....ಮರುಳ ಎದ್ದು ನಿಂತ. ಉಕ್ಕಿಬರುವ ದುಃಖ ತಡೆಯುವವನಂತೆ ಉಗುಳು ನುಂಗುತ್ತಾ ಮೂಗು ಸೊರಕ್ಕೆಂದು ಎಳೆದುಕೊಳ್ಳುತ್ತಾ—ಮುಂಗೈಯಿಂದ ಮೀಸೆ ತಿಕ್ಕುತ್ತಾ ಹೇಳಿದ್ದ.

" ಗುರುಗಳೇ—ತಾವು ಈ ಕೆಲಸ ಮಾಡಿದ್ದು ತಪ್ಪು ಎಂದು ಜನಾಭಿಪ್ರಾಯವಿದೆ. "

" ಯಾವ ಕೆಲಸ ? "

" ಅದೇ ಆ ದಾಸಪ್ಪನ ಮಾತಿಗೆ ಮರುಳಾಗಿ ಶ್ರೀಮದ್‌ಗಾಂಭೀರ್ಯ ಅಭಿವೃದ್ಧಿ ಕಾರಿಣಿ ಪರಸ್ಪರ ಸಹಾಯಕ ಸಂಘ ಲಿಮಿಟೆಡ್‌ನ ಡೈರೆಕ್ಟರುಗಿರಿಗೆ ಉಮೇದುವಾರರಾಗಿ ನಿಂತಿದ್ದು ಸರಿಯಲ್ಲ ಅಂತ ಜನ ಆಡ್ಕೊತಾರೆ...."

"—ಓ ! ಆ ವಿಷಯವೇ....ಅದರ ಬಗ್ಗೆ ನೀವು ತಲೆ ಹಾಕುವ ಗೋಜಿಗೆ ಹೋಗಬೇಡಿ....."

" ನಾವು ತಲೆ ಹಾಕುವ ವಿಷಯವಲ್ಲ ಗುರುವೇ—ಮೊಹಲ್ಲಾದ ಮಂದಿ ಎಲ್ಲಾ ನಮ್ಮ ತಲೆ ಕಂಡರೆ ತಲೆಗೊಂದು ಮಾತಾಡ್ತಿದ್ದಾರೆ....ಗುರುಗಳಿಗ್ಯಾಕೆ ಈ ದುರ್ಬುದ್ಧಿ ಬಂತೂಂತ. ನಮಗೆ ಹಾಕೋ ಭಿಕ್ಷೆ ಹಾಕ್ತಾ ಇಲ್ಲ...." ಎಂದು ಮಡೆಯ ತಡೆಯಲಾರದೆ ಈ ಮಾತುಗಳನ್ನಾಡಿದ್ದ.

ಆ ದಾಸಪ್ಪ ತಾನು ಗೆಲ್ಲಲಿಲ್ಲ ನಿಮ್ಮ ಜೋಡಿ ಸೇರ್ಕ್ಕೊಂಡಿದ್ದಾನೆ ಅಂತ ಊರ ಮಂದಿ ಅಭಿಪ್ರಾಯ ಇದೆ ಗುರುವೆ...."

—ಎಂದಿದ್ದ ಮಡ್ಡಿ, ಮುಟ್ಠಾಳನು ತನ್ನ ಅಭಿಪ್ರಾಯ ತಿಳಿಸಿದ್ದ....

....ಒಂದು ಬಿನ್ನಹ ಗುರುವೆ ಕೇಳಿ....ಆ ಹುಲಿರಾಯನಿರುವ ಆ ಸೊಸೈಟಿಗೆ ತಾವು ಖಂಡಿತ ಕಾಲಿಡಬಾರದು. ನೀವು ಡೈರೆಕ್ಟರೂಂತ ಆದಮೇಲೆ ಸದಾ ಆ ಸೊಸೈಟಿಯಲ್ಲೇ ಕಾಲ ಕಳೆದರೆ ಮಠದ ಗತಿ ಏನು, ನಮ್ಮ ಊಟಕ್ಕೆ ದಿಕ್ಕೇನು, ನಿತ್ಯಪಾರಾಯಣ-ಜಪ–ತಪ ಧ್ಯಾನ–ಉಪನ್ಯಾಸ–ನೀತಿಪಾಠಕ್ಕೆ ಯಾರನ್ನ ಗೊತ್ತು ಮಾಡ್ತೀರೀ—ದೊಡ್ಡವರಾದ ತಮಗೆ ತಿಳಿ ಹೇಳುವಷ್ಟು ಯೋಗ್ಯತೆ ಇಲ್ಲ.... ಆದರೂ....ನಾಲ್ಕು ಜನ ಅಂತಾರೆ....ಗುರುಗಳು ಮಾಡಿದ್ದು ಮೂರ್ಖ ಕೆಲಸ.... ಅಂತ....ಮುಟ್ಠಾಳ ಕೆಲಸ ಅಂತಾರೆ...."

—ಗುರುಗಳು ಕಣ್ಣು ಮುಚ್ಚಿದರು. ಮಠದಲ್ಲಿಯೇ, ತಮ್ಮ ಈ ಒಂದು ಸಾರ್ವಜನಿಕ ಸಂಪರ್ಕ ನೀತಿಯು ಮೊದಲ ಹಂತ ಸೊಸೈಟಿ ಡೈರೆಕ್ಟರ್‌ಗಿರಿಗೆ ಈ ಪಾಟಿ ಭಿನ್ನಾಭಿಪ್ರಾಯ ಇರುತ್ತದೆಂದು ತಿಳಿದಿರಲಿಲ್ಲ....ದಾಸಪ್ಪನ ಪಾರ್ಟಿ ವಹಿಸಿದ್ದು ಆತುರದ ಕೆಲಸವಾಯಿತೆ? ಎಂದು ಯೋಚಿಸಿದರು. ಏನು ಯೋಚಿಸಿದರೂ ಹೊಟ್ಟೆಯ ಹಸಿವು ತಾನು ಮುಂದು ಎಂದು ಹೇಳುತ್ತಿತ್ತಲ್ಲದೆ ಬೇರೆ ಯೋಚನೆಗೆ ಅವಕಾಶ ಕೊಡಲಿಲ್ಲ.

" ಆಯಿತು ಈಗ ಫಳಾರದ ಏರ್ಪಾಟು ಏನಾಗಿದೆ?...."

" ಈಗ ತಂದೆ ಗುರುದೇವ....ಹೊಟ್ಟೆ ಹಸಿದಾಗ ತಲೆಗೆ ವಿವೇಕ ಹತ್ತುವುದಿಲ್ಲ...."

—ಎಂದು ಹೇಳಿ ಮಡೆಯನು ಮಠದ ಉಗ್ರಾಣಕ್ಕೆ ಹೋದನು. ಆಗತಾನೆ ಕಿತ್ತು ತಂದ ಹಸಸ್ ಮುತ್ತುಗದೆಲೆಗಳನ್ನು ಹರಿವಾಣದಲ್ಲಿ ಇಟ್ಟು, ತಂದ ಫಲಗಳನ್ನೆಲ್ಲಾ ಅದರಲ್ಲಿ ಓರಣವಾಗಿ ಇರಿಸಿಕೊಂಡು ಗುರುಸನ್ನಿಧಿಗೆ ಬಂದ. ಗುರುರಾಯರ ಮುಂದೆ ಇಟ್ಟ.

ಇಂದೆನಗೆ ಆಹಾರ ಸಿಕ್ಕಿತು ಎಂದೆನ್ನುವ ವ್ಯಾಘ್ರನಂತೆ ಕಮಂಡಲದ ನೀರನ್ನು ಕೈಗೆ ಹಚ್ಚಿಕೊಂಡು ಮುಂದಿದ್ದ ಹರಿವಾಣಕ್ಕೆ ಕೈ ಹಚ್ಚಲು ಅಣಿಯಾದರು.

" ಮಡೆಯಾ....ಇದೇನು ಈ ವಾರದ ಹೊಸ ರುಚಿಯೆ? ಇವತ್ತು ಇದೇ ಫಳಾರವೇ ?"

" ಹೌದು ಗುರುವೆ "

—ಆ ಹರಿವಾಣದಲ್ಲಿ ಒಂದು ಹುಣಸೆ ಹಣ್ಣಿನ ತೊಳೆ-ಎರಡು ಬೆಂದ ಹಲಸಿನ ಬೀಜ-ನಾಲಕ್ಕು ಕವಳಿ ಹಣ್ಣು–ಮೂರು ಬೋರೆ ಹಣ್ಣು–ಉಪ್ಪು ಹಚ್ಚಿದ ಎಂಟು ನೆಲಗಡಲೆಬೀಜ–ಒಂದು ಎಳೆ ನಿಂಬೆಕಾಯಿ ಉಪ್ಪಿನಕಾಯಿ, ಒಂದು

ತುದಿಗೆ ಕುಟ್ಟಿದ ಉಪ್ಪು ಅದರ ಮಗ್ಗುಲಲ್ಲೇ ನಾಲ್ಕು ಕಿರಿನೆಲ್ಲಿಕಾಯಿ ಹೋಳು. ಇವಿಷ್ಟನ್ನು ಅಲಂಕಾರವಾಗಿ ಜೋಡಿಸಿಟ್ಟದ್ದು, ದೃಷ್ಟಿಪರಿಹಾರವೆಂಬಂತೆ ನಡುವೆ ಒಂದು ಚಿಕ್ಕ ರಬ್ಬರ್ ಚೆಂಡಿನ ಗಾತ್ರದ ರಾಗಿ ಹುರಿಹಿಟ್ಟನಮುದ್ದೆ ಅದರ ಮೇಲೊಂದು ಬೆಲ್ಲದ ತುಂಡು ಇಟ್ಟಿತ್ತು.

ಗುರುಗಾಂಪರು ಈ ರೀತಿಯ ಫಳಾರವನ್ನು ಎಂದೂ ತಿಂದವರಲ್ಲ. ಮಠದಲ್ಲಿ ಎಲ್ಲವೂ ಅವತ್ತು ಒಂದು ರೀತಿಯಲ್ಲಿ ಪ್ರತಿಭಟಿಸುವ ರೂಪವನ್ನೇ ತಾಳಿದ್ದುವು. ಸೀಸಜ್ಜಿಗೆ-ಖಾರವಾಗಿ ಉಪ್ಪಿಟ್ಟು—ಬಾಳಕದ ಮೆಣಸಿನ ಕಾಯಿ ಅರ್ಧ ಅರ್ಧ ಕೇಜಿ ರವೆಯಲ್ಲಿ ಮಾಡಿ ಬಡಿಸುವರೆಂದು ಗುರುಗಳು ತಿಳಿದಿದ್ದರು. ಆ ದಾಸಪ್ಪ ಬಂದು ಹೋದಮೇಲೆ ಊಟದ ಶಾಸ್ತ್ರ ಆಗಿ ಶ್ರೀಗಳು ವಿಶ್ರಮಿಸುವ ಮುನ್ನ ಸಂಜೆ ಫಳಾರಕ್ಕೆ ಇಂಥುದೇ ಆಗಬೇಕೆಂದು ಸೂಚಿಸಿಯೂ ಇದ್ದರು.

"—ಮಡೆಯಾ ಇಂದಿನ ಸಂಜೆ ಫಳಾರಕ್ಕೆ ನಮಗೆ ಏನು ಬೇಕು ಅನ್ನೋದನ್ನು ತಿಳಿಸಿದ್ದೆವಲ್ಲವೆ?...."

"ಗುರುಗಳೇ ನಮ್ಮ ದೇಶಕ್ಕೆ ಡೆಮಾಕ್ರಸಿ ವಕ್ರಿಸಿದ ಮೇಲೆ ನಮ್ಮಂಥವರ ಫಳಾರಕ್ಕೆ ಇವಿಷ್ಟೇ ಫಲಗಳು ಸಿಕ್ಕುವುದೆಂದು ಅತಿ ವಿನಯದಿಂದ ಹೇಳುತ್ತಿದ್ದೇನೆ...."

"ಅತಿ ವಿನಯಂ ಧೂರ್ತ ಲಕ್ಷಣಂ"

"ಆ ದಾಸಪ್ಪ ಕುಲಕರ್ಣಿಗಳು ಅತಿವಿನಯದಿಂದ ಅಡ್ಡಬಿದ್ದು ಅಂಗಲಾಚಿದಾಗ ತಾವು ಆ ಧೂರ್ತರಿಗೆ ಅಸ್ತು ಎಂಬ ಬೆಂಬಲ ನೀಡಿದ್ದೀರಿ. ಆದ್ದರಿಂದ ನಾವೂ ಅದೇ ರೀತಿ ಇದ್ದರೆ ತಮ್ಮ ಕೃಪೆ ಹೆಚ್ಚುತ್ತದೆ ಎಂದು ಹೀಗೆ ಮಾಡಿದೆ...."

"ಶಿಷ್ಯಾ—ನನ್ನ ರಾಜಕೀಯ ನಿಮಗೆ ಬ್ಯಾಡ....ನಾನು ಇಲ್ಲಿ ಈ ಮಠದಲ್ಲಿ ಗುರು....ನೀವು ಶಿಷ್ಯಂದಿರು—ನಾನು ಹೋದ ಹಾದಿಗೆ ನೀವು ಪಂಜು ಹಿಡ್ದಿದು ಬೆಳಕು ಕಾಣಿಸಬೇಕಲ್ಲದೆ, ದಾರಿಗೆ ಅಡ್ಡಲಾಗಿ ಮುಳ್ಳುಗಿಡ ಹಾಕಬಾರದು.....ಈಗ ನಾನು ಶ್ರೀಮದ್ ಗಾಂಭೀರ್ಯ ಅಭಿವೃದ್ಧಿಕಾರಿಣಿ ಪರಸ್ಪರ ಸಹಾಯಕ ಸಂಘ ಲಿಮಿಟೆಡ್‌ಗೆ ಡೈರೆಕ್ಟರಾಗಿ ನಿಲ್ಲುತ್ತಿರುವುದು ನಿಮಗೆಲ್ಲಾ ಬೇಡಾಗಿದೆ ಅಲ್ಲವೆ?...."

ಗುರುಗಳು ನೇರವಾಗಿ ಮುಖ್ಯ ಪ್ರಶ್ನೆಗೇ ಬಂದಿದ್ದರು. ಈ ಮಾತಿಗೆ ಶಿಷ್ಯರುಗಳೆಲ್ಲಾ ಸಾಲಾಗಿ ಎದ್ದು ನಿಂತರು.

"ಗಾಂಪರೊಡೆಯರೂ ಈ ಕೆಲಸಕ್ಕೆ ಇಳಿದರೇ....ಅಂತ ಮೂಲೆಮನೆ ಅನಂತಯ್ಯ ಅನ್ನಬಹುದೆ ಗುರುವೇ....

....ಮರವಿಲ್ಲ ಇನ್ನೂ ಮಾತ ಮುಂದೆ ಬರುತ್ತೆ....ಶಿಷ್ಯರುಗಳು ಮಠದ ಕಾಣಿಕೆಗೆಂತ ಅಲೆಯೋದಾದರೂ ತಪ್ಪುತ್ತೆ....ಅಂತ ಜನಗಳು ತಮ್ಮೊಳ್ ತಮಗೆ ತಾವೇ ಆಡಿಕೊಂಡರ್ ಗುರುವೇ...."

—ಎಂದ ಮಂಕ.

" ಅಂದಮೇಲಿ ಆ ದಾಸಪ್ಪ ನನ್ನ ಕಾಲಿಗೆ ಬಿದ್ದು ಕೇಳಿದಾಗ ನೀನೇನೆಂದೆಯೋ ಮಂಕಾ....."

" ಓಟ್ ಫಾರ್-ಗಾಂಪರ್-ಅಂತ ಅಂದಿದ್ದು ನಿಜ."

" ದನಾ ಕಾಯೋನೆ....ಆವಾಗ್ಲೆ ಈ ಇದೆಲ್ಲಾ ಬ್ಯಾಡಾಂತ ಬೊಗಳೋಕೆ ನಿನಗೇನು ಜ್ವರ ಬಂದಿತ್ತೇನು?...."

" ಒಂದು ಕ್ಷಣ ಪೇಪರ್‌ನೊಳಗೆ ನಿಮ್ಮ ಫೋಟೋ ಸಮೇತ 'ಶ್ರೀಮದ್ ಗಾಂಭೀರ್ಯ ಅಭಿವೃದ್ಧಿಕಾರಿಣಿ ಪರಸ್ಪರ ಸಹಾಯಕ ಸಂಘದ ಅಧ್ಯಕ್ಷರಾಗಿ ಪ್ರಚಂಡ ಬಹುಮತದಿಂದ ಗುರುಗಾಂಪರು ಆಯ್ಕೆಯಾಗಿ ಬಂದರು'—ಅನ್ನೋ ವಿಷಯ ಪ್ರಿಂಟಾಗಿ ಅದನ್ನ ಓದುವ ಯೋಗದ ಕನಸು ಕಂಡು ಹಾಗಂತ ಕೂಗಿ ಕೊಂಡೆ ಗುರುವೆ....."

"....ಅಯ್ಯೋ ಮಂಕೇ....'ಜನಸೇವೆಯೇ ಧನಾರ್ಜನಸೇವೆ' ಅನ್ನೋದು ತಿಳ್ಕಂಡಿಲ್ಲೇನೋ...." ಎಂದ ಮರುಳ.

" ಮರುಳಾ....ಧನಾರ್ಜನ ಅಲ್ಲ ಜನಾರ್ಧನ ಅಂತಿರಬೇಕು ನಿನ್ನ ಅಂಬೋಣ....ಮಾತಿನಮೇಲೆ ನಿಗಾ ಇರ್ಲಿ...."

" ಗುರುಗಳೇ....ಹಸಂದ್ರೂ ನೀವು ಆ ದಾಸಪ್ಪನ ಮಾತಿಗೆ ಮರುಳಾಗಿ ನಮ್ಮ ಜನಾ ಆರ್ಧ ಆಗೋ ಅಂಥಾ ಕೆಲಸವಾದ ಈ ಸೊಸೈಟಿ ಹವ್ಯಾಸಕ್ಕೆ ಹೋಗ ಬಾರದು...."

" ಇದರಲ್ಲಿ ಅಂಥಾ ಕೆಟ್ಟದ್ದು ಏನದೆಯೋ ಶಿಷ್ಯಾ"

" ಎಲ್ಲಾ ಬಿಟ್ಟು ಆ ದಾಸಪ್ಪನ ಜೊತೆ ಹಾಕ್ಕೊಂಡಿದ್ದಾರಲ್ಲಾ ಅಂತ ಊರಿಗೆ ಊರೇ ಆಡ್ಕೋತಿದೆ ಗುರುವೆ....ಇದು ಮಠದವರು ಮಾಡೋ ಕೆಲಸ ವಲ್ಲವಂತೆ...."

" ಇಂಥಾ ಕೆಲಸಗಳನ್ನೆಲ್ಲಾ ಸಾರ್ವಜನಿಕರೇ ಮಾಡಬೇಕು....ಮಠದವರು ಇದಕ್ಕೆ ಹೋಗಬಾರದೂಂತ ಯಾವುದಾದರೂ ಧರ್ಮಶಾಸ್ತ್ರದಲ್ಲಿ ಹೇಳಿದೆಯೇನು? ಮನುಧರ್ಮ ಶಾಸ್ತ್ರದಲ್ಲಿ ಓದಿದ ನೆನಪುಂಟೂ? ಬೊಗಳು...."

—ಬೊಗಳು ಎಂದೆನ್ನುವ ಸಮಯಕ್ಕೆ ಸರಿಯಾಗಿ ಫ್ಲೀಡರ್ ಹಿಲ್ಲೂರಾ ಯರು ಬೊಗಳುವ ನಾಯಿಯಂತೆಯೇ ಠಾಕಕ್ಕೆ ಕಾಲಿಕ್ಕಿದ್ದರು. ಹಿಲ್ಲೂರಾಯನ ಜೊತೆ ಪಿಟೀಲು ಪಾಪಯ್ಯನವರೂ ಬಂದಿದ್ದರು. ಹಿಲ್ಲೂರಾಯನ ಕೈಯ್ಯಲ್ಲಿ ತಟ್ಟೆ ಇತ್ತು ಅದರಲ್ಲಿ ಒಂದು ಚಿಪ್ಪು ಸೇಲಂ ರಸಬಾಳೆ—ಒಂದು ಚಿಕ್ಕ ಷರಂಗಿ ಕಾಯಿ—ಕಲ್ಸಕ್ರೆ—ದ್ರಾಕ್ಷಿ—ಒಂದು ಮೊಟ್ಟೆ ಸಮೇತವಾದ ತೆಂಗಿನಕಾಯಿ—

ಒಂದು ಎಳೇ ನಿಂಬೆಕಾಯಿ, ಇವಿಷ್ಟನ್ನು ಇಟ್ಟಿದ್ದ. ಬಂದವನೇ ಗಾಂಪರೊಡೆಯರ ಮುಂದೆ ತಟ್ಟೆ ಇಟ್ಟು ಅಡ್ಡಬಿದ್ದ. ಪಿಟೀಲು ಪಾಪಯ್ಯ ಪಕ್ಕದ ಮನೆಯವರಲ್ಲಿ ಬೆಳೆದು ತನ್ನ ಮನೆಯತ್ತ ರೆಂಬೆ ಚಾಚಿದ್ದ ಹಲಸಿನ ಮರದಿಂದ ಒಂದು ಕಾಯಿ ಕಿತ್ತು ತಂದಿದ್ದ. ಅದನ್ನ ಗುರುಗಳ ಮುಂದೆ ಉರುಳುಬಿಟ್ಟು ಅಡ್ಡಬಿದ್ದು ನಿಂತ.

ಗುರುಗಳಿಗೆ ಬರಗಾಲದಲ್ಲಿ ಈ ಎಲ್ಲ ಹಣ್ಣುಗಳು ಬಂದದ್ದು ಆನಂದವನ್ನುಂಟುಮಾಡಿ ಇಬ್ಬರಿಗೂ ಆಶೀರ್ವಾದಮಾಡಿ ತಿಲಾಕ್ಷತೆ ಕೊಟ್ಟರು.

"ಗುರುಗಳೇ ನಾನು ಯಾರೂಂತ ತಮಗೆ ತಿಳಿದಿರಬಹುದು...."—ಎಂದು ದೇಶಾವರಿ ನಗೆ ಬೀರುತ್ತಾ ಪಿಳ್ಳೂರಾಯರು ಕೈ ಹೊಸೆದರು.

"....ತಾವು ಪ್ಲೀಡರ್ ಪಿಳ್ಳೂರಾಯರೂಂತ ಊರಿಗೇ ತಿಳಿದಿರುವಾಗ ಗುರುಗಳಿಗೆ ಅಷ್ಟು ತಿಳಿದಿರೊಲ್ಲವೇ...."

—ಎಂದು ಪಿಟೀಲು ಪಾಪಯ್ಯ ಗುರುಗಳಿಗೆ ಇದ್ದ ಈತನ್ಯಾರು? ಎಂಬ ಚಿಂತೆ ಪರಿಹರಿಸಿದ.

"ಹಿಹಿಹಿ....ಇವರು ಗೊತ್ತಿಲ್ಲದೆ ಉಂಟೇ...." ಎಂದು ಗುರುಗಳೂ ನಕ್ಕರು. ಅವರ ಜೊತೆ ಎಲ್ಲ ಶಿಷ್ಯರೂ ನಕ್ಕೇ ನಕ್ಕರು. ಅವರು ನಕ್ಕಿದ್ದು ಈ ಪಿಳ್ಳೂರಾಯ ಗುರುಗಳ ಫಳಾರದ ಸಮಸ್ಯೆ ಸಧ್ಯ ಬಿಡಿಸಿದನಲ್ಲಾ ಎಂಬ ಸಂತೋಷದಿಂದ "ಆಯ್ತು ಶುಭಮಸ್ತು ಏನು ಪಿಳ್ಳೂರಾಯರು ಬಂದದ್ದೂ...."

"ಗುರುಗಳೇ....ನಿಮಗೆ ಮುಖಕ್ಕೆ ಮಸಿ ಹಚ್ಚಿ ಮಂಗಳಾರತಿ ಮಾಡಬೇಕೂಂತ ಇದ್ದಾನೆ ಆ ದಗಲ್ಬಾಜಿ ದಾಸಪ್ಪ....ಅಲ್ಲಾ ನಿಮ್ಮ ಯೋಗ್ಯತೆ ಏನು.... ಆ ಸುಡುಗಾಡು ಸಾವಿರತರ್ಲೆ ಇರೋ ಸೊಸೈಟಿ ಯೋಗ್ಯತೆ ಏನು?....ಛಿ ಛೀ.... ಯಾರೋ ಹೀಗೇ ಹೇಳಿದರು....'ಪಾಪ ಗಾಂಪರೊಡೆಯರಿಗೆ ತಿಳೀದು; ಅವರನ್ನ ಜುಟ್ಟಿಗೆ ಹಾಕ್ಕೊಂಡು ಅವರನ್ನ ಕೋತಿ ಕುಣಿಸಿದ ಹಾಗೆ ಕುಣಸ್ತಾನೆ' ಅಂತ ಇಡೀ ಮೊಹಲ್ಲಾನೇ ಮಾತಾಡ್ಕೊತಾ ಇದೆ...."

—ಪಿಳ್ಳೂರಾಯನ ಮಾತು ಕೇಳಿ ಶಿಷ್ಯರುಗಳೆಲ್ಲಾ ಖುಷಿ ಪಟ್ಟರು.

"ನೀವು ಹೇಳಿ ಪಿಳ್ಳೂರಾಯರೇ....ನಾವು ಹೇಳಿದರೆ ಗುರುಗಳು ನಮ್ಮ ಮೇಲೆ ಗುರು ಗುರು ಗುಟ್ತಾರೆ...."

"ಹೇಳ್ತೀನೆ....ಹೇಳ್ತೀನೆ....ಮೇಲಾಗಿ ಗುರುವಯ್ಯರೇ ನೀವು ಈ ಸೊಸೈಟಿ ಸಹವಾಸದಿಂದ ದೂರ ಇರೋದು ಮಠದ ದೃಷ್ಟಿಯಿಂದ ಒಳ್ಳೇದು. ಈಗ ನಾನು ಬಂದ ಮುಖ್ಯ ಉದ್ದೇಶವೆಂದರೆ—ಗುರುಗಳಾದ ತಮ್ಮಿಂದ ದೇಶೋದ್ಧಾರ ಕಾರ್ಯ ಇನ್ನೂ ಹೆಚ್ಚಿನ ರೀತಿಯಲ್ಲಿ ಆಗಬೇಕಾಗಿದೆ....ತಾವು ಡೆಲ್ಲಿ ಪಾರ್ಲಿಮೆಂಟಿಗೆ ನಿಲ್ಲಬೇಕು. ಇದು ಧರ್ಮಸಾಮ್ರಾಜ್ಯಸ್ಥಾಪನಾ ಆಗಬೇಕಾದ ಕಾಲ. ಗೋ

ಬ್ರಾಹ್ಮಣ ಹಿತಾಯಚದ ಮೊದಲ ಹಂತವಾದ ಗೋವಿನ ದೆಸೆಯಿಂದ ದೇಶಾದ್ಯಂತ ಅನೇಕ ಮಠದ ಸ್ವಾಮಿಗಳು ಜಗದ್ಗುರುಗಳು ಉಪವಾಸ ಮಾಡುತ್ತಿರುವುದು ಸರಿಯಷ್ಟೆ....ಇಂಥಾ ಉಪವಾಸದಿಂದ ದೇಹಶ್ರಮವೇ ಹೊರತು ಸರಕಾರದ ಮೇಲೆ ಪರಿಣಾಮ ಆಗಲ್ಲ....ಅದಕ್ಕೆ ನೀವುಗಳೇ ದೇಶಾದ್ಯಂತ ಪಾರ್ಲಿಮೆಂಟಿಗೆ ಆಯ್ಕೆ ಬಂದರೆ 'ಗೋವಿನ' ರಕ್ಷಣೆಗೆ ನೀವು ಯಾರ ಮುಲಾಜೂ ಇಲ್ಲದೆ ಶಾಸನಮಾಡಬಹು ದಲ್ಲವೆ?....ಒಟ್ಟಿನಲ್ಲಿ ನನ್ನ ಅಂಬೋಣ ಖನ್ರಪಾಂದ್ರೆ....ನೀವು ಈ ಯಃಕಶ್ಚಿತ್ ಶ್ರೀಮದ್ ಗಾಂಭೀರ್ಯಕ್ಕೆ ನಿಲ್ಲಬೇಡಿ....ನಾನು ನಿಮ್ಮನ್ನ ಡೆಲ್ಲಿಗೆ ಕಳಿಸ್ತೀನಿ...."

—ಗಲ್ಲಿಗೇ ಕಳಿಸುವವನಂತೆ ಹೇಳಿದ್ದ ಪಿಲ್ಲೂರಾಯ. ಸಧ್ಯಕ್ಕೆ ಪಿಲ್ಲೂ ರಾಯನ ರಾಜಕೀಯವೆಂದರೆ ಗುರುಗಳು ಆ ದಾಸಪ್ಪನ ಜೊತೆ ಸೊಸೈಟಿ ಡೈರೆಕ್ಟರ್ ಗಿರಿಗೆ ನಿಲ್ಲದೇ ಇರುವಂತೆ ಮಾಡುವುದೇ ಆಗಿತ್ತು.

"ಗುರು ಗಾಂಪರೇ....ನನ್ನ ವಿನಂತಿ ಇಷ್ಟೆ....ನೀವು ಆ ದಾಸಪ್ಪನ ಜೊತೆ ಸೇರಿ ಕಿಮ್ಮತ್ತು ಕಡಿಮೆ ಮಾಡ್ಕೊಬೇಡಿ—ತಮ್ಮ ಮಠ ವಿಶಾಲವಾದದ್ದು....ಶಿಷ್ಯ ಕೋಟಿ ಅಪಾರ....ಕಾಂಗ್ರೆಸ್ ನಂತರ ವರ್ಚಸ್ಸು ಕಡಿಮೆಯಾದ ಈ ಸಮಯದಲ್ಲಿ ಮತ್ತೆ ಬೇರೆ ಯಾರಿಗೆ ಓಟು ಬರುತ್ತೆ ಗುರುವೇ! ಈ ಯತ್ಕಿಂಚಿತ್ ಶ್ರೀಮದ್ ಗಾಂಭೀರ್ಯ ಅಭಿವೃದ್ಧಿಕಾರಿಣಿ ಸೊಸೈಟಿಗೆ ಥೂ ಅಂತ ಉಗಿದುಬಿಡಿ. ನಿಮಗೆ ಡೆಲ್ಲಿ ದೂರ ಆದರೆ....ಇಲ್ಲಿ ವಿಧಾನ ಸೌಧಕ್ಕೆ ನಿಲ್ಬೋವಂತೆ, ಖನೀಗ....ಆದೂ ಬ್ಯಾಡ ಪಾರ್ಲಿಮೆಂಟರಿ ರಾಜಕೀಯ ವಿದ್ಯೆ ಮೊದಲು ಹಸ್ತಗತವಾಗಲಿ ಅಂತ ನಿಮ್ಮ ಅಂಬೋಣ ಆದರೆ ಹೇಳಿ ನಿಮ್ಮನ್ನ ಮುನ್ಸಿಪಾಲ್ಟಿಗೇ ಸೇರ್ಸೋಣಂತೆ.... ಆದರೆ ಛೀ ಛೀ....ಆ ಸುಡುಗಾಡು ಸೊಸೈಟಿ ರಾಜಕೀಯ ನಿಮ್ಮ ಕಿಮ್ಮತ್ತಿಗೆ ಕಡಿಮೆ....ಗುರುವೇ....ರಾಜಗುರುಗಳು—ಹುಣಿಸೇಹಣ್ಣು ಸಾಲಕ್ಕೆ ಹೋದಹಾಗೆ ಆಯ್ತದೆ ಗುರುಗಳೇ....ನೀವು ಆ ಸೊಸೈಟಿ ದಾಸಪ್ಪನ ಮಾತಿಗೆ ಮರುಳಾಗಿ ನಿಂತ್ರೆ ಕೆಟ್ರಿ...."

—ಗುರುಗಳ ಮನಃಸ್ಥಿತಿ ದೇವರೇ ಗತಿ ಆಯ್ತು. ಪಿಲ್ಲೂರಾಯನ ಮಾತಿಗೆ ಗುರುಗಳು ಮಾರುಹೋಗಿದ್ದರು. ಅದರಲ್ಲಿ ಸತ್ಯವಿತ್ತು. ತಮ್ಮ ಭಾರೀ ಮಠದ ವರ್ಚಸ್ಸನ್ನು ಕೇವಲ ಸೊಸೈಟಿಯೊಂದರ ಡೈರೆಕ್ಟರ್ ಗಿರಿಗೆ ವ್ಯಯ ಮಾಡುವುದರಲ್ಲಿ ಅರ್ಥವಿರಲಿಲ್ಲ.

"ನೀನು ಹೇಳೋದೂ ಒಂದು ರೀತೀಲಿ ಸರಿಯೇ....ಆದರೇ...."

—ಎಂದು ಅವರು ರಾಗ ಎಳೀತಿದ್ದಂತೆ ಕಾದ ಕಬ್ಬಿಣವನ್ನು ಆಗಲೇ ಬಡಿದು ಬಗ್ಗಿಸಬೇಕೆಂದು ಪಿಲ್ಲೂರಾಯ ತನ್ನ ರಾಜಕೀಯ ಜಾಲವನ್ನು ಬೀಸಿ ಆ ದಾಸಪ್ಪ ನೊಡನೆ ಸೊಸೈಟಿಗೆ ಓಟಿಗೆ ನಿಲ್ಲದಂತೆ ತಡೆಯುವ ರಾಮಬಾಣದ ವಿದ್ಯೆ ತೆಗೆದ....

"ತೊಗೊಳ್ರೊ ಶಿಷ್ಯಂದ್ರಾ...." ಎಂದು ಎಲ್ಲರಿಗೂ ಎಂಟೆಂಟಾಣೆ ಕೊಟ್ಟು —ಗುರುಗಳಿಗೆ ಫಲದ ತಾಟಿನಲ್ಲಿದ್ದ ಪರಂಗಿ ಹಣ್ಣಿನ ಕೆಳಗಿದ್ದ ಹತ್ತು ರೂಪಾಯಿ ನೋಟು ತೋರಿಸಿ ಅಡ್ಡಬಿದ್ದು....

"ಗುರುವೇ ನೀವು ಮುನ್ಸಿಪಾಲ್ಟಿಗೇ ಲಾಯಕ್ಕು....ಬ್ಯಾಡ ಈ ದಾಸಪ್ಪನ ಸಹವಾಸ'' ಎಂದು ಹೇಳಿ ಅವರು ನಕ್ಕಾಗ ಈತ ಹೊರಬಂದ. ಪಿಟೀಲು ಪಾಪಯ್ಯ ಅಲ್ಲೀ ಉಳಿದ.

ಮಠದಲ್ಲಿ ಅವನ ಪಿಟೀಲಿನಲ್ಲಿ 'ನಂಬದಿರು ಈ ದೇಹ ನಿತ್ಯವಲ್ಲ' ಎಂಬ ಹಾಡು ಝೇಂಕರಿಸಿತು.

---

ಕೃಷ್ಣಮೆನನ್, ಬರ್ವೆ ಇವರ ಯಾದವೀ ಕಲಹದಲ್ಲಿ ಸ್ವತಂತ್ರ ಪಕ್ಷದ ಚಿ. ಮುನ್ನಿ ಭಾಗವಹಿಸಬಾರದು ಎಂದು ರಾಜಾಜಿ.

—ಒಂದೇ ಕಲ್ಲಿನಿಂದ ಕಾಂಗ್ರೇಸ್, ಕಮ್ಯೂನಿಷ್ಟ ಹಕ್ಕಿಗಳನ್ನು ಹೊಡೆದಂತಾಯಿತು.

* * * *

ಬ್ರಹ್ಮದೇಶದಲ್ಲಿ ಬ್ರಹ್ಮಜ್ಞಾನಾಭಿಲಾಷಿ ಭಾಗ್ಲಾ ಅವರು ವೈಭವದ ಸ್ವಾಗತವನ್ನು ಪಡೆದರಂತೆ.

* * * *

ಅವಿರೋಧವಾಗಿ ಆಯ್ಕೆಯಾದವರು ಅರ್ಧಲಕ್ಷ ಪಗಡಿ ಕೊಟ್ಟರು, ನಿಂತಿದ್ದ ಎದುರಾಳುಗಳಿಗೆ ಅನ್ನೋದು ಕುಹಕ.

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

# ಬೆಂಗಾಲ್

# ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

ಬಾಳಿಕೆಯ ಮತ್ತು
ಚೆನ್ನಾದ ಬಳಕೆಯ ಸಲುವಾಗಿ ...



ಉತ್ತಮ ಉಪಕರಣಗಳನ್ನೇ
ಅವಲಂಬಿಸಿರಿ

● ಶ್ರೇಷ್ಠ ದರ್ಜೆಯ ಉಕ್ಕಿನಿಂದ ತಯಾರಿಸಲ್ಪಡುತ್ತವೆ.
● ನುರಿತ ಕೆಲಸಗಾರರಿಂದ ಅತ್ಯಾಧುನಿಕವಾದ ರೀತಿಯಲ್ಲಿ ಹದ ಕೊಡಲಾಗುತ್ತದೆ. ● ಮಾರುವ ಮುನ್ನ ಎಲ್ಲಾ ಉಪಕರಣಗಳನ್ನು ವಿಶೇಷ ರೀತಿಯಲ್ಲಿ ಪರೀಕ್ಷಿಸಲಾಗುತ್ತೆ.
● ನೀವು ಕೊಡುವ ಹಣಕ್ಕೆ ಖಾತ್ರಿಯಾದ ಮಾಲುಗಳು—ಕಾರಣ ಅವು ಯಾವ ತರಹ ಕಠಿಣ ಕೆಲಸಗಳಲ್ಲಿಯೂ ಉಪಯೋಗಕರವಾಗಿರುತ್ತವೆ. ಮತ್ತು ಬಹಳ ಕಾಲ ನೀವು ಅದನ್ನು ತೃಪ್ತಿಕರವಾಗಿ ಉಪಯೋಗಿಸಬಹುದು.
● ವ್ಯವಸಾಯಕ್ಕೆ ಕಾಮಗಾರಿ ಕೆಲಸಗಳಿಗೆ, ಟೀ, ಮತ್ತು ಕಾಫಿ ತೋಟಗಳ ಕೆಲಸಕ್ಕೆ ಅಗತ್ಯವಾದ್ದು ● ನಿಮ್ಮ ಅಗತ್ಯಗಳಿಗೆ ಫ್ಯಾಕ್ಟರಿಯಲ್ಲಿ ಅಥವ ನಿಮ್ಮ ಪ್ರಾಂತ್ಯದಲ್ಲಿರುವ ನಮ್ಮ ಅಧೀಕೃತ ಏಜಂಟರಲ್ಲಿ ವ್ಯವಹರಿಸಿರಿ.

## ಮೈಸೂರು ಇಂಪ್ಲಿಮೆಂಟ್ಸ್ ಫ್ಯಾಕ್ಟರಿ, ಹಾಸನ

Edited and Published by M. Sivaram
Printed by B. S. Iyengar, Bangalore-2